PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 178 ಪುಟಗಳು: 04 ಬೆಲೆ: 02 ದಿನಾಂಕ: 01-09-2026 ಮಂಗಳವಾರ email: enammadhruthinews@gmail.com Pho : 7353595904

## ಶ್ರಾವಣದ ಮೂರನೇ ಸೋಮವಾರ : ಬುಡ್ಡಮ್ಮ ದೇವಿಗೆ ವಿಶೇಷ ಪೂಜೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲೆಯ ಮೈನಹಳ್ಳಿ ಗ್ರಾಮದ ಆರಾಧ್ಯ ದೇವತೆ ಶ್ರೀ ಶಿವಶರಣೆ ಬುಡ್ಡಮ್ಮ ದೇವಿಯ ಶ್ರಾವಣದ ನಿಮಿತ್ತ ಮೂರನೇ ಸೋಮವಾರದಂದು ಗ್ರಾಮಸ್ಥರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು.



ಬೆಳಿಗ್ಗೆ ದೇವಸ್ಥಾನದಲ್ಲಿ ಬುಡ್ಡಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಭಜನಾ ತಂಡದೊಂದಿಗೆ ಗ್ರಾಮಸ್ಥರು ಬುಡ್ಡಮ್ಮ ದೇವಿಯ ಮನೆಗೆ ತೆರಳಿ, ಪಲ್ಲಕ್ಕಿಯಲ್ಲಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಕ್ತಿಭಾವದಿಂದ ಪಾದಯಾತ್ರೆ ಕೈಗೊಂಡರು. ಮೈನಹಳ್ಳಿ ಗ್ರಾಮದಿಂದ ಪಾದಯಾತ್ರೆಯ ಮೂಲಕ ಬಿಸರಹಳ್ಳಿ, ಬೇಲೂರು ಹಾಗೂ ಕಾತರಕಿ ಗ್ರಾಮಗಳ ಮಾರ್ಗವಾಗಿ ತೆರಳಿ ತುಂಗಭದ್ರಾ ನದಿಯ ದಂಡೆಯಲ್ಲಿ ದೇವಿಗೆ ವಿಶೇಷ ಪೂಜೆ ಹಾಗೂ ಮಂಗಳಾರತಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರು ದೇವಿಗೆ ಜೈಕಾರ ಹಾಕಿ ಭಕ್ತಿಯನ್ನು ಮೆರೆದರು. ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಗ್ರಾಮಸ್ಥರು ತಮ್ಮ ಮನೆಗಳಿಂದ ಸಿಹಿ ದಿನಸು ಚಪಾತಿ, ವಿವಿಧ ಬಗೆಯ ಪಲ್ಯ, ಕರ್ಚಿಕಾಯಿ ಸೇರಿದಂತೆ ಹಲವು ಬಗೆಯ ಆಹಾರ ಪದಾರ್ಥಗಳನ್ನು ತಂದು ಸಾಮೂಹಿಕವಾಗಿ ಊಟ ಮಾಡಿದರು. ಈ ಮೂಲಕ ಭಕ್ತರು ಪರಸ್ಪರ ಸೌಹಾರ್ದತೆ ಹಾಗೂ ಭಕ್ತಿಭಾವವನ್ನು ಹಂಚಿಕೊಂಡರು. ನಂತರ ಗ್ರಾಮಸ್ಥರು ಕಾತರಕಿ ಗುಡ್ಡಾನೂರು ಸೇರಿದಂತೆ ವಿವಿಧ ಸ್ಥಳಗಳಿಗೆ ತೆರಳಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮೆರವಣಿಗೆಯೊಂದಿಗೆ ಗ್ರಾಮಕ್ಕೆ ಆಗಮಿಸಿ ಹಲವು ಮನೆಗಳಲ್ಲಿ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬಿಸರಳ್ಳಿ ಗ್ರಾಮದಲ್ಲಿಯೂ ವಿಶೇಷ ಪೂಜೆ ಸಲ್ಲಿಸಿ, ನಂತರ ಸ್ವಗ್ರಾಮ ಮೈನಹಳ್ಳಿಗೆ ಪಲ್ಲಕ್ಕಿಯೊಂದಿಗೆ ಮರಳಲಾಯಿತು. ದೇವಸ್ಥಾನದಿಂದ ಬುಡ್ಡಮ್ಮ ದೇವಿಯ ಮನೆಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಊಡಿ ತುಂಬುವ ಕಾರ್ಯಕ್ರಮ ನೆರವೇರಿಸಲಾಯಿತು. ಗ್ರಾಮದಲ್ಲಿ ಮೆರವಣಿಗೆ ನಡೆಸಿ ಧಾರ್ಮಿಕ ಕಾರ್ಯಕ್ರಮಗಳನ್ನು ಸಮಾಪ್ತಿಗೊಳಿಸಲಾಯಿತು. ಶ್ರಾವಣದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಮೈನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮಳೆ–ಬೆಳೆ ಸಮೃದ್ಧಿಯಾಗಲಿ, ಗ್ರಾಮಸ್ಥರಿಗೆ ಸುಖ–ಶಾಂತಿ ನೆಲೆಸಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಯಿತು.

## ಕೊಪ್ಪಳದಲ್ಲಿ ರಾಯರ 355ನೇ ಆರಾಧನಾ ಮಹೋತ್ಸವ : ಅದ್ಧೂರಿ ರಥೋತ್ಸವ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಇಲ್ಲಿನ ರೈಲು ನಿಲ್ದಾಣದ ಸಮೀಪದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ 355ನೇ ಆರಾಧನಾ ಮಹೋತ್ಸವ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಆರಾಧನೆಯ ಕೊನೆಯ ದಿನವಾದ ಸೋಮವಾರ ನಡೆದ ರಥೋತ್ಸವಕ್ಕೆ ಅಪಾರ ಸಂಖ್ಯೆಯ ಭಕ್ತರು ಸಾಕ್ಷಿಯಾದರು.



ಮಠದ ಸುತ್ತಲೂ ಇರುವ ಪ್ರದಕ್ಷಣಾ ಪಥದಲ್ಲಿ ನಡೆದ ರಥೋತ್ಸವದಲ್ಲಿ ಭಕ್ತಿಯಿಂದ ರಾಯರ ಹಾಡುಗಳು ಮೊಳಗಿದವು. ಮುಂದೆ ಪಲ್ಲಕ್ಕಿ ಸಾಗುತ್ತಿದ್ದರೆ ಹಿಂದೆ ರಥದಲ್ಲಿ ರಾಯರ ಮೂರ್ತಿ ಇರಿಸಲಾಗಿತ್ತು. ಪ್ರದಕ್ಷಣಾ ಪಥದಲ್ಲಿ ರಥ ಸಾಗುತ್ತಿದ್ದರೆ ಭಕ್ತರು ಉತ್ತುತ್ತಿ ಎಸೆದು ಕೈ ಮುಗಿದು ಭಕ್ತಿ ಸಮರ್ಪಿಸಿದರು. ಮಧ್ಯಾಹ್ನ ಹಾಗೂ ರಾತ್ರಿ ಎಲ್ಲ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ತೇರು, ರಾಯರ ವೃಂದಾವನ ಮತ್ತು ಎದುರು ಇರುವ ಆಂಜನೇಯನ ಮೂರ್ತಿಗೆ ತರಹೇವಾರಿ ಹೂಗಳಿಂದ ಅಲಂಕಾರ ಮಾಡಲಾಗಿತ್ತು. ರಥೋತ್ಸವ ಮುಗಿದ ಬಳಿಕ ತೇರಿನಲ್ಲಿದ್ದ ಹಣ್ಣುಗಳನ್ನು ಮಠದ ಅರ್ಚಕರು ಎಸೆಯುತ್ತಿದ್ದರೆ ಭಕ್ತರು ರೂಪದಲ್ಲಿ ಭಕ್ತಿಯಿಂದ ಪಡೆದುಕೊಂಡರು. ಹೆಸರಾಂತ ಗಾಯಕ ಪುತ್ತೂರು ನರಸಿಂಹ ನಾಯಕ ಅವರಿಂದ ನಡೆದ ಭಕ್ತಿ ಸಂಗೀತ ಕಾರ್ಯಕ್ರಮ ಸಂಗೀತಪ್ರಿಯರ ಮನಸ್ಸು ಗೆದ್ದಿತು. ಭಕ್ತಿಪ್ರಧಾನ ಹಾಗೂ ದಾಸರ ಪದಗಳನ್ನು ಹಾಡಿ ಜನರನ್ನು ಅವರು ಖುಷಿಪಡಿಸಿದರು. ಬಳಿಕ ಸೇವಾ ಪುರಸ್ಕಾರ, ಗುಡೆಬೆಲ್ಲೂರಿನ ಪಂಡಿತ್ ವೆಂಕಟನರಸಿಂಹಾಚಾರ್ಯ ಅವರಿಂದ ಪ್ರವಚನ ನಡೆಯಿತು.

## ಸೆಪ್ಟಂಬರ್ 04ರಂದು ನೇರ ಪ್ರದರ್ಶನ ಕಾರ್ಯಕ್ರಮ

ಧೃತಿ ನ್ಯೂಸ್ ಸುದ್ದಿ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ರಾಯಚೂರು ಹಾಗೂ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಸೆಲ್ಕೋ ಫೌಂಡೇಶನ್, ಬೆಂಗಳೂರು ಇವರ ಸಂಯುಕ್ತಾಶ್ರದಲ್ಲಿ ಸ್ವಾವಲಂಬಿ ಬದುಕಿನತ್ತ–ವಿಕಲಚೇತನರಿಗಾಗಿ ಜೀವನೋಪಾಯ ತಂತ್ರಜ್ಞಾನಗಳ ನೇರ ಪ್ರದರ್ಶನವನ್ನು ಸೆಪ್ಟಂಬರ್ 04ರ ಬೆಳಿಗ್ಗೆ 9.30ಕ್ಕೆ ರಾಯಚೂರಿನ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ಅರ್ಹ ವಿಕಲಚೇತನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

### ಯಲಬುರ್ಗಾದಲ್ಲಿ ಕೋಟ್ಯಂತರ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಡಿಗಲ್ಲು ಮತ್ತು ಉದ್ಘಾಟನೆ

# ಬರ ಪರಿಹಾರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಉನ್ನತ ಶಿಕ್ಷಣ ಸುಧಾರಣೆಗೆ ಸರ್ಕಾರ ಬದ್ಧ : ಬಸವರಾಜ ರಾಯರಡ್ಡಿ

ಕೊಪ್ಪಳ: ಬರ ಪರಿಹಾರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮತ್ತು ಉನ್ನತ ಶಿಕ್ಷಣ ಸುಧಾರಣೆಗೆ ನಮ್ಮ ಸರ್ಕಾರವು ಬದ್ಧವಾಗಿದೆ ಎಂದು ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ ಹಾಗೂ ಯಲಬುರ್ಗಾ ಪಟ್ಟಣ ಪಂಚಾಯತ್ ವತಿಯಿಂದ ಪಟ್ಟಣದ ಬಯಲು ರಂಗಮಂದಿರದಲ್ಲಿ ಆಗಸ್ಟ್ 30ರಂದು ಆಯೋಜಿಸಲಾಗಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಡಿಗಲ್ಲು ಮತ್ತು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಸ್ತುತ ರಾಜ್ಯದಲ್ಲಿ ಬರಗಾಲ ಎದುರಾಗಿದ್ದು, ಮೊದಲ ಹಂತದಲ್ಲಿ 101 ತಾಲೂಕುಗಳನ್ನು ಬರಪೀಡಿತ ಎಂದು ಗುರುತಿಸಲಾಗಿದೆ. ಮುಂಬರುವ ದಿನಗಳಲ್ಲಿ ಕೇಂದ್ರದ ಎನ್‌ಡಿಆರ್‌ಎಫ್ ಮಾನದಂಡಗಳ ಪ್ರಕಾರ ಯಲಬುರ್ಗಾ, ಕುಷ್ಟಗಿ, ಕೊಪ್ಪಳ, ಕಾರಟಗಿ ಸೇರಿದಂತೆ ಸುಮಾರು 78 ರಿಂದ 80 ತಾಲೂಕುಗಳನ್ನು ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರಿಸಿ ರೈತರಿಗೆ ಅಗತ್ಯ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ, ಗೃಹಜ್ಯೋತಿ, ಯುವನಿಧಿ



ಯೋಜನೆಗಳು ಮತ್ತು ಸಾಮಾಜಿಕ ಭದ್ರತಾ ಪಿಂಚಣಿಗಳು ನಿರಂತರವಾಗಿ ಜನರಿಗೆ ತಲುಪುತ್ತಿವೆ. ಸಬ್ಸಿಡಿ ಹಾಗೂ ನೇರ ಸೌಲಭ್ಯಗಳಿಗಾಗಿ ಸರ್ಕಾರ ಲಕ್ಷಾಂತರ ಕೋಟಿ ರೂ. ವೆಚ್ಚ ಮಾಡುತ್ತಿದೆ ಎಂದರು.

ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮುಂದಿನ ಎರಡು ತಿಂಗಳಲ್ಲಿ 3,000 ಸಹಾಯಕ ಪ್ರಾಧ್ಯಾಪಕರನ್ನು ಹಾಗೂ ಸೆಪ್ಟೆಂಬರ್ 5ರೊಳಗೆ 320 ಪ್ರಾಂಶುಪಾಲರನ್ನು ಸಂಪೂರ್ಣ ಪಾರದರ್ಶಕವಾಗಿ ಮೆರಿಟ್ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು. ರಾಜ್ಯದಲ್ಲಿ ಸುಮಾರು 249 ನಕಲಿ ಪಿಎಚ್‌ಡಿ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, ಇಂತಹ ನಕಲಿ ಪ್ರಮಾಣಪತ್ರ ಹೊಂದಿದವರ ವಿರುದ್ಧ ಕ್ರಿಮಿನಲ್ ಕೇಸ್ ಮತ್ತು ಚೀಟಿಂಗ್ ಕೇಸ್ ದಾಖಲಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಬೆಂಗಳೂರಿನಲ್ಲಿ ಐಐಟಿ ಮಾದರಿಯ ವಿಶ್ವವಿದ್ಯಾಲಯ ಸ್ಥಾಪನೆ, ಎಐ ವಿಶ್ವವಿದ್ಯಾಲಯ ಹಾಗೂ ಜಾಗತಿಕ ಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಆಕರ್ಷಿಸಲು 'ಗ್ಲೋಬಲ್ ಎಜುಕೇಶನ್ ಸಮ್ಮಿಟ್' ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

**ಕ್ಷೇತ್ರ ಪ್ರವಾಸ:**

ಯಲಬುರ್ಗಾ ಮತ್ತು ಕುಕನೂರು ತಾಲೂಕಿನ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಿ ಬಗೆಹರಿಸಲು ಮುಂದಿನ 10 ದಿನಗಳಲ್ಲಿ ಯಲಬುರ್ಗಾ ಕ್ಷೇತ್ರದ ಒಟ್ಟು 36 ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ 'ಜನಸಂಪರ್ಕ ಸಭೆ'ಗಳನ್ನು ನಡೆಸಲಾಗುವುದು ಎಂದು ಬಸವರಾಜ ರಾಯರಡ್ಡಿ ಅವರು ತಿಳಿಸಿದರು. ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯಾವುದೇ ಕೊರತೆಯಿಲ್ಲ ಎಂಬುದಕ್ಕೆ ಯಲಬುರ್ಗಾದಲ್ಲಿ ರೂ. 31 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆಯೇ ಸಾಕ್ಷಿಯಾಗಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿಯಾಗಿದೆ ಎಂದು ವಿರೋಧ ಪಕ್ಷದವರು ಟೀಕಿಸುತ್ತಾರೆ. ಖಜಾನೆ ಖಾಲಿಯಾಗಿದ್ದರೆ ಇಷ್ಟೊಂದು ದೊಡ್ಡ ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಜನರಿಂದ ಸಂಗ್ರಹಿಸಿದ ತೆರಿಗೆ ಹಣವನ್ನು ಗ್ಯಾರಂಟಿ ಯೋಜನೆಗಳ ಮೂಲಕ ಮತ್ತೆ ಜನಸಾಮಾನ್ಯರಿಗೆ ತಲುಪಿಸಿ ಅವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲಾಗುತ್ತಿದೆ ಎಂದರು.

**ಬಸವರಾಜ ರಾಯರಡ್ಡಿ ಅವರ ಅಭಿವೃದ್ಧಿ ಕಾರ್ಯಗಳಿಗೆ ಪ್ರಶಂಸೆ:**

ಸಚಿವರಾದ ಬಸವರಾಜ ರಾಯರಡ್ಡಿ ಅವರ ಆಡಳಿತ ದಕ್ಷತೆ ಹಾಗೂ ಅನುಭವ ಅಪಾರವಾಗಿದೆ. ಕುಕನೂರು ಮತ್ತು ಯಲಬುರ್ಗಾ ಭಾಗದಲ್ಲಿ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಜಾಸೌಧ, ಕಲ್ಯಾಣ ಮಂಟಪ ಹಾಗೂ ಶಿಕ್ಷಣ ಸಂಸ್ಥೆಗಳ ಸುಧಾರಣೆ ಮಾಡಿದ್ದಾರೆ. ರಾಜ್ಯ ಬಜೆಟ್ ಮತ್ತು ಆರ್ಥಿಕತೆಯ ಆಳವಾದ ಜ್ಞಾನ ಹೊಂದಿರುವ ರಾಯರಡ್ಡಿ ಅವರು ತಮ್ಮ ಕ್ಷೇತ್ರಕ್ಕೆ ಗರಿಷ್ಠ ಅನುದಾನ ತಂದು ಮಾದರಿ ಕ್ಷೇತ್ರವನ್ನಾಗಿ ರೂಪಿಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದ ನಮ್ಮ ಸರ್ಕಾರವು ಸರ್ವರಿಗೂ ಸಮಪಾಲು.

2ನೇ ಪುಟಕ್ಕೆ....

## ದೋಟಿಹಾಳದಲ್ಲಿ ಕುಷ್ಟಗಿ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟಕ್ಕೆ ಅದ್ಧೂರಿ ಚಾಲನೆ

ಧೃತಿ ನ್ಯೂಸ್ ಸುದ್ದಿ

**ವರದಿ: ಅಮರೇಶ ತಾರಿವಾಳ**

ದೋಟಿಹಾಳ: ಕುಷ್ಟಗಿ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟವು ದೋಟಿಹಾಳ ಗ್ರಾಮದಲ್ಲಿ ಉತ್ಸಾಹ ಹಾಗೂ ಕ್ರೀಡಾ ಸಂಭ್ರಮದ ವಾತಾವರಣದಲ್ಲಿ ನಡೆಯಿತು. ಕ್ರೀಡಾಕೋಟಾವನ್ನು ಕಾಲೇಜು ಸಂಸ್ಥೆಯ ಉಪಾಧ್ಯಕ್ಷ ಲಾಡ್ ಸಾಬ್ ಕೊಳ್ಳಿ ನೆರವರಿಸಿ ಮಾತನಾಡಿದರು.

ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಶಿಕ್ಷಣದ ಜೊತೆಗೆ ಕ್ರೀಡೆಗೂ ಮಹತ್ವದ ಸ್ಥಾನವಿದೆ. ಕ್ರೀಡೆ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ ಶಿಸ್ತು, ಸಮಯಪಾಲನೆ, ಆತ್ಮವಿಶ್ವಾಸ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ" ಎಂದು ಹೇಳಿದರು. ಮಹಾಂತೇಶ್ ಬಾದಾಮಿ ಮಾತನಾಡಿ ತಾಲೂಕು ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು ಮುಂದಿನ ಹಂತದ ಕ್ರೀಡಾಕೂಟಕ್ಕೆ ಆಯ್ಕೆಯಾಗುವ ಅವಕಾಶ ಹೊಂದಿದ್ದು, ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಲು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೇ ವಹಿಸಿದ ದೋಟಿಹಾಳ ಪದವಿ ಪೂರ್ವ ಕಾಲೇಜು



ಪ್ರಾಚಾರ್ಯರಾದ ನಾಗರಾಜ ಮಾತನಾಡಿ ಎಲ್ಲಾ ವಿದ್ಯಾರ್ಥಿಗಳು ನಿರ್ಣಾಯಕರ ನಿರ್ಣಯಕ್ಕೆ ಬದ್ಧರಾಗಿ ನಿಮ್ ಪ್ರತಿಭೆ ಹೊರ ಹಾಕಲು ಉತ್ತಮ ಅವಕಾಶವಿದ್ದು ಇದರ ಸದುಪಯೋಗ ಪಡೆದುಕೊಳ್ಳಲು ಹೇಳಿದರು. ದೋಟಿಹಾಳದಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟ ಆಯೋಜನೆಯಾಗಿರುವುದು ಗ್ರಾಮಸ್ಥರಲ್ಲಿಯೂ ಸಂತಸ ಮೂಡಿಸಿದ್ದು, ಕ್ರೀಡಾಂಗಣದಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಂಡಿತು. ಕ್ರೀಡಾಕೂಟವು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವದ ಜೊತೆಗೆ ಸ್ನೇಹ, ಸಹಕಾರ ಮತ್ತು ಕ್ರೀಡಾ ಸೌಹಾರ್ದತೆಯನ್ನು ಬೆಳೆಸುವ ವೇದಿಕೆಯಾಗಿ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಕಾಲೇಜು ಸಮಿತಿಯ ಸರ್ವ ಸದಸ್ಯರು ಮತ್ತು ಕಾಲೇಜಿನ ಎಲ್ಲಾ ಶಿಕ್ಷಕರ ವೃಂದ ಹಾಗೂ ಊರಿನ ಗಣ್ಯರು ವಿವಿಧ ಕಾಲೇಜುಗಳ ಪ್ರಾಚಾರ್ಯರು, ದೈಹಿಕ ಶಿಕ್ಷಕರು ಪ್ರೌಢ ಶಾಲೆಯ ಮುಖ್ಯ ಗುರುಗಳು ಎಸ್ ಡಿ ಎಮ್ ಸಿ ಅಧ್ಯಕ್ಷರು ಸರ್ವ ಸದಸ್ಯರು ಎಲ್ಲಾ ಕಾಲೇಜು ಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ನೂತನ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಹಿಲ್ ಬಾಗ್ಲಾ ಅವರಿಗೆ ಸ್ವಾಗತ

ಧೃತಿ ನ್ಯೂಸ್ ಸುದ್ದಿ

ಗಂಗಾವತಿ: ಕೊಪ್ಪಳ ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಸ್‌ಪಿ) ಶ್ರೀ ಸಾಹಿಲ್ ಬಾಗ್ಲಾ, ಐಪಿಎಸ್ ಅವರು ಅಧಿಕಾರ ವಹಿಸಿಕೊಂಡರು.



ಈ ಸಂದರ್ಭದಲ್ಲಿ ಗಂಗಾವತಿ ಉಪವಿಭಾಗದ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್, ಹಾಗೂ ಸಿದ್ದಲಿಂಗಪ್ಪಗೌಡ ಪಾಟೀಲ್ ಹಾಗೂ ಶಶಿಧರಯ್ಯ ಹಿರೇಮಠ ಅವರು ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಹಿಲ್ ಬಾಗ್ಲಾ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಶುಭಾಶಯಗಳನ್ನು ಕೋರಿದರು. ನೂತನ ಎಸ್‌ಪಿ ಅವರ ನೇತೃತ್ವದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯ ಕಾರ್ಯಚಟುವಟಿಕೆಗಳು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಯಲಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಉತ್ತಮ ಸೇವೆ ಸಲ್ಲಿಸುವಂತಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸಲಾಯಿತು.

### ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ

# ಮೃತರ ಖಾತೆಗೆ ಜಮೆಯಾದ ಗೃಹಲಕ್ಷ್ಮಿ ಹಣ ವಾಪಸ್: ರೆಡ್ಡಿ ಶ್ರೀನಿವಾಸ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಗೃಹಲಕ್ಷ್ಮಿ ಮೀ ಯೋಜನೆಯಡಿ ಫಲಾನುಭವಿ ಮರಣ ಹೊಂದಿದ ಮೇಲೂ ಅವರ ವಾರಸುದಾರರು ಅಥವಾ ಮನೆಯವರು ಆ ಹಣವನ್ನು ಬಳಕೆ ಮಾಡಿದ್ದು, ಅದನ್ನು ಮರಳಿ ನೀಡಲು ಈ ಹಿಂದೆ ಮೃತರಿಗೆ ತಿಳುವಳಿಕೆ ನೀಡಿದ್ದಾಗ್ಯೂ ನಿರೀಕ್ಷಿತ ಪ್ರಮಾಣದಲ್ಲಿ ಅಂತಹ ಹಣವನ್ನು ಸರ್ಕಾರಕ್ಕೆ ಮರಳಿ ಪಾವತಿಸಿಲ್ಲ. ಆದರಿಂದ ಇನ್ನು ಮುಂದೆ ಇಂತಹ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ಅಥವಾ ಮನೆಯವರಿಗೆ ಹಣ ಮರುಪಾವತಿಸುವಂತೆ ಸೂಕ್ತ ನೋಟಿಸ್ ನೀಡಿ, ಭವಿಷ್ಯದಲ್ಲಿ ಇದು ಮರುಕಳಿಸದಂತೆ ಎಚ್ಚರ ವಹಿಸಿ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಅಧಿಕಾರಿಗಳಿಗೆ ಹೇಳಿದರು. ಸೋಮವಾರದಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯಾದ್ಯಂತ ಗೃಹಲಕ್ಷ್ಮಿ ?ಮೀ ಯೋಜನೆಯ ಫಲಾನುಭವಿಗಳ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಅದರಂತೆ ನಮ್ಮ ಜಿಲ್ಲೆಯಲ್ಲಿ 7,086 ಫಲಾನುಭವಿಗಳು ಮೃತಪಟ್ಟಿದ್ದು, ಅದರಲ್ಲಿ 2,664 ಫಲಾನುಭವಿಗಳ ಖಾತೆಗೆ ಮರಣ ಹೊಂದಿದ ನಂತರ 13,709 ಕಂತುಗಳಲ್ಲಿ ಒಟ್ಟು ರೂ.2,74,18,000/– ಮೊತ್ತವು ಮರಣ ಹೊಂದಿದ ನಂತರ ಜಮೆಯಾದ ಧನಸಹಾಯವಾಗಿರುತ್ತದೆ. ಇದರಲ್ಲಿ ರೂ.87,64,608/– ಗಳನ್ನು ಸರ್ಕಾರಕ್ಕೆ ಮರುಪಾವತಿಸಲಾಗಿದೆ. ರೂ.1,86,53,392/– ಮೊತ್ತ ಮರುಪಾವತಿ ಬಾಕಿ ಇದೆ. ರೂ.1,96,000/– ಗಳನ್ನು ಬ್ಯಾಂಕ್ ಖಾತೆಗಳಲ್ಲಿಯೇ ಫ್ರೀಜ್ ಮಾಡಲಾಗಿದೆ. ಮರಣ ಹೊಂದಿದ ಫಲಾನುಭವಿಗಳ ಕುಟುಂಬದ ಸದಸ್ಯರು ಮೃತರ ಖಾತೆಯಿಂದ ಡ್ರಾ



ಮಾಡಿಕೊಂಡಿರುವ ಮೊತ್ತ ರೂ.2,64,147/– ಆಗಿದ್ದು, ಸರ್ಕಾರಕ್ಕೆ ಮರುಪಾವತಿಸುವಂತೆ ಕುಟುಂಬ ಸದಸ್ಯರಿಗೆ ಸೂಕ್ತ ತಿಳುವಳಿಕೆ ನೀಡಿ, ಚಲನ್‌ಗಳನ್ನು ಸೃಜಿಸಿ ವಿತರಿಸಲಾಗಿದೆ. ಆದರೂ ನಿರೀಕ್ಷಿತ ಪ್ರಮಾಣದಲ್ಲಿ ಇದುವರೆಗೂ ಸರ್ಕಾರಕ್ಕೆ ಹಣ ಪಾವತಿಸಿರುವುದಿಲ್ಲ. ಆದ್ದರಿಂದ ಇನ್ನುಮುಂದೆ ನಿಯಮಾನುಸಾರ ಗಡುವು ನಿಗದಿಪಡಿಸಿ ಹೆಚ್ಚುವರಿ ಸೆಳೆದ ಹಣವನ್ನು ಮರುಪಾವತಿಸುವಂತೆ ಸೂಕ್ತ ನೋಟಿಸ್ ನೀಡಿ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.

ಶಕ್ತಿ ಯೋಜನೆಯಡಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗದಲ್ಲಿ ಜೂನ್ 2023 ರಿಂದ ಜುಲೈ 2026 ರವರೆಗೆ 12,23,60,828 ವಯಸ್ಕರು ಹಾಗೂ 48,37,871 ಮಕ್ಕಳು ಸೇರಿದಂತೆ ಒಟ್ಟು 12,71,98,699 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದು, ಇದಕ್ಕಾಗಿ ವಿಭಾಗದಿಂದ ರೂ.4,76,38,79,212/– ಗಳನ್ನು ವೆಚ್ಚ ಮಾಡಲಾಗಿದೆ. ಮಹಿಳಾ ಪ್ರಯಾಣಿಕರಿಗೆ ಶೀಘ್ರದಲ್ಲಿಯೇ ಮೆಟ್ರೋ ಕಾರ್ಡಗಳ ರೀತಿ ಸ್ಮಾರ್ಟ್ ಐಡಿ ಕಾರ್ಡ್ ಗಳನ್ನು ನೀಡಲು ಯೋಜನೆ ರೂಪಿಸಲಾಗುತ್ತಿದೆ ಎಂದು ಅಧ್ಯಕ್ಷರು ಹೇಳಿದರು ಗೃಹಜ್ಯೋತಿ ಯೋಜನೆಯಡಿ ಫಲಾನುಭವಿಗಳ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಜೆಸ್ಕಾಂ ಕೊಪ್ಪಳ ವಿಭಾಗದಲ್ಲಿ 1,39,966 ಹಾಗೂ ಗಂಗಾವತಿ ವಿಭಾಗದಲ್ಲಿ 1,46,764 ಫಲಾನುಭವಿಗಳು ಸೇರಿದಂತೆ ಒಟ್ಟು 2,86,730 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಶೇ.98.92 ರಷ್ಟು ಫಲಾನುಭವಿಗಳ ನೋಂದಣಿ ಪೂರ್ಣಗೊಂಡಿದ್ದು, ಆಗಸ್ಟ್ 2023 ರಿಂದ ಜುಲೈ 2026 ರವರೆಗೆ ಒಟ್ಟು ರೂ.430.06 ಕೋಟಿ ಗಳ ಸಬ್ಸಿಡಿಯನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಇರುವ ಫಲಾನುಭವಿಗಳ ಸರ್ವೇ ಕಾರ್ಯವನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯುವನಿಧಿ ಯೋಜನೆಯಡಿ ಡಿಸೆಂಬರ್ 2023 ರಿಂದ ಆಗಸ್ಟ್ 29, 2026 ರವರೆಗೆ 15,764 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದು, ಒಟ್ಟು ರೂ.43,41,42,000/– ಗಳ ಮೊತ್ತವನ್ನು ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಜಮೆ ಮಾಡಲಾಗಿದೆ. ಇದರೊಂದಿಗೆ ಯುವನಿಧಿ ಪ್ಲಸ್ ತರಬೇತಿ ಕಾರ್ಯಕ್ರಮದಡಿ ಸಿಡಾಕ್ ನಿಂದ 34 ಅಭ್ಯರ್ಥಿಗಳು ಹಾಗೂ ಕೊಪ್ಪಳ ಸರ್ಕಾರಿ ಐಟಿಐ ಸಂಸ್ಥೆಯಿಂದ 30 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಯೋಜನೆಯ ಲಾಭ ಪಡೆದ ಫಲಾನುಭವಿಗಳಲ್ಲಿ ಯೋಜನೆಯ ಮಾನದಂಡಗಳನ್ನು ಪೂರ್ಣಗೊಳಿಸಿದ ಹಾಗೂ ಉನ್ನತ ಶಿಕ್ಷಣ ಅಥವಾ ಉದ್ಯೋಗ ದೊರೆತ ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ, ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಿ, ಅರ್ಹರಿಗೆ ಯೋಜನೆಯ ಲಾಭ ಒದಗಿಸಿ. ತರಬೇತಿ ಹಾಗೂ ಯೋಜನೆಯ ಕುರಿತು ಕಾಲೇಜು, ಯುವ ಸಮುದಾಯಗಳ ಕಾರ್ಯಕ್ರಮಗಳಲ್ಲಿ ಜಾಗೃತಿ ಮೂಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜುಲೈ 2026 ರವರೆಗೆ ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯ ಅನ್ನಭಾಗ್ಯ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಚೀಟಿದಾರರಿಗೆ 4,10,53,652.80/– ರೂ. ಗಳನ್ನು ಪಾವತಿಸಲಾಗಿದೆ. ಅರ್ಹ ಪಡಿತರ ಚೀಟಿದಾರರಿಗೆ ನಿಯಮಾನುಸಾರ ಪಡಿತರ ವಿತರಣೆಗೆ ಕ್ರಮ ವಹಿಸಿ. ಇತ್ತೀಚೆಗೆ ಗಂಗಾವತಿಯಲ್ಲಿ ಪತ್ತೆಯಾದ ಅಕ್ರಮ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಜಪ್ತಿ ಮಾಡಿ ನಿಯಮಾನುಸಾರ ಅರ್ಹರಿಗೆ ವಿತರಿಸಿ. ತಪ್ಪಿತಸ್ಥ ನ್ಯಾಯಬೆಲೆ ಅಂಗಡಿಯ ಪರವಾನಿಗೆಯನ್ನು ಅಮಾನತ್ತು ಮಾಡಲಾಗಿದ್ದು, ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಿ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಮಾತನಾಡಿ, ಗೃಹಲಕ್ಷ್ಮಿ ?ಮೀ ಬಾಕಿ ಸರ್ವೇ ಕಾರ್ಯದಲ್ಲಿ ತಾಂತ್ರಿಕ ತೊಂದರೆಗಳು ಇದ್ದು, ಅವುಗಳನ್ನು ಪರಿಹರಿಸಿ ನಿಗದಿತ ಅವಧಿಯೊಳಗೆ ಸರ್ವೇ ಕಾರ್ಯ ಪೂರ್ಣಗೊಳಿಸಿ. ಪ್ರತಿ ಯೋಜನೆಯಲ್ಲೂ ಫಲಾನುಭವಿಗಳ ಯಶೋಗಾಥೆಯನ್ನು ತಯಾರಿಸಿ ಸಲ್ಲಿಸಿ ಎಂದು ಸಂಬಂಧಿಸಿದ ಅನುಷ್ಠಾನ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರು ತಮಮ್ ವ್ಯಾಪ್ತಿಯ ಫಲಾನುಭವಿಗಳು, ಸಮಸ್ಯೆಗಳು, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ.ಖಾದ್ರಿ, ಮಂಜುನಾಥ ಗೊಂಡಬಾಳ, ಅಮರೇಶಪ್ಪ ಶರಣಪ್ಪ ಗಾಂಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ಪೀರ್ ಸಾಬ್ ರಾಜಾ ಸಾಬ್ ಗೊಂದಿಹೊಸಳ್ಳಿ, ಬಾಲಚಂದ್ರ ಸ್ಯಾಮುವೆಲ್, ಶಕುಂತಲಾ ಬಿ.ಎಮ್., ಶಾರದಾ ಕಟ್ಟಿಮನಿ, ಹಜರತ್ ಹುಸೇನ, ಆನಂದ ಹಾಸಲ್ಮರ, ವೆಂಕಟೇಶ ಬಾಬು, ಸೇರಿದಂತೆ ವಿವಿಧ ಇಲಾಖೆಗಳ ಗ್ಯಾರಂಟಿ ಅನುಷ್ಠಾನ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

1ನೇ ಪುಟದಿಂದ....

## ಬರ ಪರಿಹಾರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಉನ್ನತ ಶಿಕ್ಷಣ ಸುಧಾರಣೆಗೆ ಸರ್ಕಾರ ಬದ್ಧ : ಬಸವರಾಜ ರಾಯರಡ್ಡಿ

ಸಮಬಾಳು ಎಂಬ ತತ್ವದಡಿ ಮುನ್ನೆಡೆಯುತ್ತಿದೆ. ವಿಕಾಸಶೀಲ ಹಾಗೂ ಸೌಹಾರ್ದಶೀಲ ಕರ್ನಾಟಕ ನಿರ್ಮಾಣಕ್ಕಾಗಿ ಸಮುದಾಯ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯ, ಕ್ರೀಡೆ, ಫಿಟ್‌ನೆಸ್ ಹಾಗೂ ಕೌಶಲ್ಯಾಭಿವೃದ್ಧಿ ಮೂಲಕ ಯುವಜನರನ್ನು ಸಬಲೀಕರಣಗೊಳಿಸಿ, ತಳಮಟ್ಟದ ಆಡಳಿತದಲ್ಲಿ ಸಕ್ರಿಯ ಪಾಲುದಾರರನ್ನಾಗಿ ಮಾಡುವ ಉದ್ದೇಶದಿಂದ ಭಾರತ್ ಜೋಡೋ ಯುವ ಸಂಘಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ ಎಂದು ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಮಾತನಾಡಿ, ಒಂದು ಕ್ಷೇತ್ರದ ಸಮಗ್ರ ಅಭಿವೃದ್ಧಿ ಹೇಗಿರಬೇಕು ಎಂಬುದಕ್ಕೆ ಯಲಬುರ್ಗಾ ಕ್ಷೇತ್ರವೇ ಸಾಕ್ಷಿಯಾಗಿದ್ದು, ಯುವ ರಾಜಕಾರಣಿಗಳು ಸಚಿವ ಬಸವರಾಜ ರಾಯರೆಡ್ಡಿ ಅವರ ಕಾರ್ಯವೈಖರಿಯನ್ನು ಮಾದರಿಯಾಗಿಟ್ಟುಕೊಂಡು ಕಲಿಯಬೇಕು. ಒಂದು ಕ್ಷೇತ್ರದಲ್ಲಿ ಶೈಕ್ಷಣಿಕ, ಕೃಷಿ, ಆರೋಗ್ಯ, ದೇವಾಲಯಗಳು, ಸಮುದಾಯ ಭವನಗಳು, ಶಾಲೆ ಹಾಗೂ ರಸ್ತೆಗಳು ಯಾವ ರೀತಿ ಇರಬೇಕು ಎಂಬುದನ್ನು ನೋಡಲು ಇಡೀ ರಾಜ್ಯದ ಶಾಸಕರು ಹಾಗೂ ನಾಯಕರು ಯಲಬುರ್ಗಾಕ್ಕೆ ಬಂದು ನೋಡಬೇಕು. ಇಲ್ಲಿನ ಪ್ರತಿಯೊಂದು ಕಾಮಗಾರಿಯೂ ಅತ್ಯಂತ ಗುಣಮಟ್ಟದಿಂದ ಕೂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಯಲಬುರ್ಗಾ ಪಟ್ಟಣದಲ್ಲಿ ರೂ. 8.50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗಿದ್ದು, ಇದು ಸ್ಥಳೀಯ ಕ್ರೀಡಾಪಟುಗಳು ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ಸಾರ್ವಜನಿಕ–ರಿಗೆ ಕಂದಾಯ, ತಾಲೂಕು ಪಂಚಾಯಿತಿ ಸೇರಿದಂತೆ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ದೊರೆಯುವಂತೆ ಮಾಡಲು ರಾಜ್ಯ ಸರ್ಕಾರದ 8 ಕೋಟಿ ಮತ್ತು ಕೆಕೆಆರ್‌ಡಿಬಿಯ 8 ಕೋಟಿ ಅನುದಾನ ಸೇರಿ ರೂ. 16 ಕೋಟಿ ವೆಚ್ಚದಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗಿನ ಶಾಲೆ–ಕಾಲೇಜುಗಳು, ಕೌಶಲ್ಯ ತರಬೇತಿ ಕೇಂದ್ರಗಳು ಹಾಗೂ ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣಕ್ಕೆ ಸಚಿವರು ಒದಗಿಸಿರುವ ಅನುದಾನದಿಂದ ಈ ಕ್ಷೇತ್ರದಲ್ಲಿ ಮೂಲಸೌಕರ್ಯ ಬಲವರ್ಧನೆಗೊಂಡಿದೆ ಎಂದು ಹೇಳಿದರು.

*ಬರ ಪರಿಸ್ಥಿತಿ ಕುರಿತು ವರದಿ:* ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದ ಬೆಳೆ ಹಾನಿಯಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿದ್ದು, ಸರ್ಕಾರಕ್ಕೆ ವಿಸ್ತೃತ ವರದಿ ಸಲ್ಲಿಸಲಾಗಿದೆ. ಈಗಾಗಲೇ ಕುಕನೂರು, ಕನಕಗಿರಿ ಮತ್ತು ಗಂಗಾವತಿ ತಾಲೂಕುಗಳನ್ನು ತೀವ್ರ ಬರಪೀಡಿತ ಎಂದು ಘೋಷಿಸಲಾಗಿದ್ದು, ಮುಂದಿನ ದಿನಗಳಲ್ಲಿ ಯಲಬುರ್ಗಾ, ಕೊಪ್ಪಳ, ಕುಷ್ಟಗಿ ಮತ್ತು ಕಾರಟಗಿ ತಾಲೂಕುಗಳನ್ನೂ ಸಹ ಬರಪೀಡಿತ ಪಟ್ಟಿಗೆ ಸೇರಿಸಲು ಪುನಃ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಜಿಲ್ಲಾಧಿಕಾ–ರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಕೊಪ್ಪಳ ಜಿಲ್ಲಾ ಪೋಲಿಸ್ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಾಹಿಲ್ ಬಾಗ್ಲಾ, ಮಾಜಿ ಸಚಿವರಾದ ಅಮರೇಗೌಡ ಪಾಟೀಲ ಬಯ್ಯಾಪೂರ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಯಲಬುರ್ಗಾ ತಹಶೀಲ್ದಾರ ಪ್ರಕಾಶ ನಾಸಿ, ತಾ.ಪಂ ಇಓ ನೀಲಗಂಗಾ ಬಬಲಾದ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ನಾಗೇಶ್ ಸೇರಿದಂತೆ ಇತರೆ ಜನಪ್ರತಿನಿಧಿಗಳು, ಹಲವು ಮುಖಂಡರು, ವಿವಿಧ ಇಲಾಖೆಗಳ ಅಧಿಕಾ–ರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು. ಕೋಟ್ಯಂತರ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಉದ್ಘಾಟನೆಗೆ ಚಾಲನೆ:* ಯಲಬುರ್ಗಾ ಪಟ್ಟಣದಲ್ಲಿ ರೂ. 850 ಲಕ್ಷಣಗಳ ಅನುದಾನದಲ್ಲಿ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ ನಿರ್ಮಾಣಕ್ಕೆ ಅಡಿಗಲ್ಲು, ರೂ. 1600 ಲಕ್ಷಣಗಳ ಅನುದಾನದಲ್ಲಿ ಪ್ರಜಾ ಸೌಧ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ, ರೂ. 115 ಲಕ್ಷಣಗಳ ಅನುದಾನದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಮೂರ್ತಿ ಪ್ರತಿಷ್ಠಾಪನೆಗೆ ಶಂಕುಸ್ಥಾಪನೆ, ರೂ. 100 ಲಕ್ಷಣಗಳ ಅನುದಾನದಲ್ಲಿ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸಮಾಜ (ಹಿಂದುಳಿದ ಕುರುಬರ ಸಮಾಜ) ಮಂದಿರ ನಿರ್ಮಾಣಕ್ಕೆ ಅಡಿಗಲ್ಲು, ರೂ. 98.4 ಲಕ್ಷಣಗಳ ವೆಚ್ಚದಲ್ಲಿ ನಿರ್ಮಿಸಲಾದ ಸರಕಾರಿ ಪದವಿ ಪೂರ್ವ ಕಾಲೇಜಿನ 4 ಕೊಠಡಿಗಳ ಉದ್ಘಾಟನೆ, ರೂ. 49.5 ಲಕ್ಷಣಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ 2 ಕೊಠಡಿಗಳ ಉದ್ಘಾಟನೆ, ರೂ. 98.4 ಲಕ್ಷಣಗಳ ವೆಚ್ಚದಲ್ಲಿ ನಿರ್ಮಿಸಲಾದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ 4 ಕೊಠಡಿಗಳ ಉದ್ಘಾಟನೆ ಹಾಗೂ ರೂ. 200 ಲಕ್ಷಣಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಸರಕಾರಿ ಉರ್ದು ಪ್ರೌಢ ಶಾಲೆ ಕಟ್ಟಡ ನಿರ್ಮಾಣ ಮತ್ತು ಪಿಠೋಪಕರಣಗಳ ಉದ್ಘಾಟನೆಗೆ ಕಾರ್ಯಕ್ರಮದಲ್ಲಿ ಚಾಲನೆ ದೊರೆಯಿತು.

## ರಾಜ್ಯದಲ್ಲಿ 7 ತಿಂಗಳಲ್ಲಿ 558 ಕೋಟಿ ರೂ. ಸೈಬರ್ ವಂಚನೆ, ಸಂತ್ರಸ್ತರಿಗೆ ವಾಪಸ್ ಬಂದಿದ್ದು ಕೇವಲ 1.9 ಕೋಟಿ ಮಾತ್ರ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಸೈಬರ್ ವಂಚನೆಯ ಜಾಲ ವಿಸ್ತರಿಸುತ್ತಿದ್ದು, ಕೇವಲ ಏಳು ತಿಂಗಳ ಅವಧಿಯಲ್ಲಿ ಕರ್ನಾಟಕದ ಜನರು ಬರೋಬ್ಬರಿ ?558 ಕೋಟಿ ಕಳೆದುಕೊಂಡಿದ್ದಾರೆ. ಆದರೆ, ಗೃಹ ಇಲಾಖೆಯ ಅಧಿಕೃತ ಅಂಕಿಅಂಶಗಳ ಪ್ರಕಾರ, ಸಂತ್ರಸ್ತರಿಗೆ ವಾಪಸ್ ದೊರೆತಿರುವುದು ಕೇವಲ ?1.9 ಕೋಟಿ ಮಾತ್ರ. ಈ ವರ್ಷದ ಜನವ–ರಿಯಿಂದ ಜುಲೈ ಅಂತ್ಯದವರೆಗೆ ಸೈಬರ್ ವಂಚನೆಯ ಮೂಲಕ ಜನರು ಕಳೆದುಕೊಂಡಿರ ?558 ಕೋಟಿಯಲ್ಲಿ ಅಧಿಕಾರಿಗಳು ?35.9 ಕೋಟಿಯನ್ನು ಮಧ್ಯಂತರ ಹಂತದಲ್ಲಿ ಸ್ಥಗಿ–ತಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದ–ರೆ, ಸಂತ್ರಸ್ತರಿಗೆ ವಾಸ್ತವಿಕವಾಗಿ ಮರಳಿರುವ ಮೊತ್ತವು ಸ್ಥಗಿತಗೊಳಿಸಿದ ಹಣದ ಕೇವಲ ಶೇ.5ರಷ್ಟಿದ್ದು, ಒಟ್ಟು ವಂಚನೆಯ ಮೊತ್ತದ ಶೇ.0.4ಕ್ಕಿಂತಲೂ ಕಡಿಮೆಯಾಗಿದೆ. ಇದು ಸೈಬರ್ ಅಪರಾಧ ನಿಯಂತ್ರಣ ಹಾಗೂ ವಂಚನೆಯಾದ ಹಣವನ್ನು ಮರುಪಡೆಯುವಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ಎತ್ತಿ ತೋ–ರಿಸಿದೆ.




**ಸಿಬ್ಬಂದಿ ಕೊರತೆ ದೊಡ್ಡ ಸವಾಲು**

ರಾಜ್ಯದ ಸೈಬರ್ ಅಪರಾಧ ಪೊಲೀಸ್ ವ್ಯವಸ್ಥೆಯು ತೀವ್ರ ಮಾನವಶಕ್ತಿ ಕೊರತೆಯನ್ನು ಎದುರಿಸುತ್ತಿರುವುದು ಹಣ ಮರುಪಡೆಯುವ ಪ್ರಕ್ರಿಯೆಯ ಮೇಲೂ ಪರಿಣಾಮ ಬೀರಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ, ಬೆಂಗಳೂರು ಆಯುಕ್ತರ ಕಚೇರಿಯಲ್ಲಿರುವ ಸೈಬರ್ ಅಪರಾಧ ಪೊಲೀಸ್ ಠಾಣೆಯೊಂದರಲ್ಲೇ 200 ಹುದ್ದೆಗಳು ಸೇರಿದಂತೆ ಒಟ್ಟು 320 ಹುದ್ದೆಗಳು ಇನ್ನೂ ಖಾಲಿ ಉಳಿದಿವೆ. ಸಿಬ್ಬಂದಿಯ ಭಾರಿ ಕೊರತೆಯಿಂದ ಪ್ರಕರಣಗಳ ತನಿಖೆಯ ವೇಗ ಹಾಗೂ ಗುಣಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತಿದೆ.

**ಪ್ರಕರಣಗಳು ಇಳಿಕೆ, ನಷ್ಟದ ಮೊತ್ತ ಏರಿಕೆ**

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದರೂ, ಪ್ರತಿ ಪ್ರಕರಣದಲ್ಲಿ ವಂಚನೆಯಾಗುತ್ತಿರುವ ಸರಾಸರಿ ಮೊತ್ತ ಗಣನೀಯವಾಗಿ ಹೆಚ್ಚಾಗಿದೆ.2024: ರಾಜ್ಯದಲ್ಲಿ 17,890 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಒಟ್ಟು ?1,841 ಕೋಟಿ ನಷ್ಟವಾಗಿತ್ತು. ಈ ಪೈಕಿ ?257.8 ಕೋಟಿಯನ್ನು ಸ್ಥಗಿತಗೊಳಿಸಲಾಗಿದ್ದು, ?183.6 ಕೋಟಿಯನ್ನು ಸಂತ್ರಸ್ತರಿಗೆ ವಾಪಸ್ ನೀಡಲಾಗಿತ್ತು. ಪ್ರತಿ ಪ್ರಕರಣದ ಸರಾಸರಿ ನಷ್ಟ ?10.3 ಲಕ್ಷ.2025: ಒಟ್ಟು 10,703 ಪ್ರಕರಣಗಳು ವರದಿಯಾಗಿದ್ದು, ?1,756.6 ಕೋಟಿ ನಷ್ಟ ಉಂಟಾಗಿತ್ತು. ?158.5 ಕೋಟಿಯನ್ನು ಸ್ಥಗಿತಗೊಳಿಸಲಾಗಿದ್ದು, ?76.7 ಕೋಟಿಯನ್ನು ಸಂತ್ರಸ್ತರಿಗೆ ಮರಳಿಸಲಾಗಿ–ತ್ತು. ಪ್ರತಿ ಪ್ರಕರಣದ ಸರಾಸರಿ ನಷ್ಟ ?16.4 ಲಕ್ಷ.ಇದರಿಂದ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ, ವಂಚಕರು ದೊಡ್ಡ ಮೊತ್ತದ ಹಣಕ್ಕೆ ಕನ್ನ ಹಾಕುತ್ತಿರುವುದು ಸ್ಪಷ್ಟವಾಗುತ್ತದೆ.

**3 ವರ್ಷದಲ್ಲಿ ?3,932 ಕೋಟಿ ವಂಚನೆ**

2024ರಿಂದ 2026ರವರೆಗೆ ಕೇವಲ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಸೈಬರ್ ವಂಚನೆಯಿಂದ ?3,932 ಕೋಟಿ ನಷ್ಟವಾಗಿದೆ. ಇದರಲ್ಲಿ ಇದುವರೆಗೆ ಕೇವಲ ?262 ಕೋಟಿ ಮಾತ್ರ ಸಂತ್ರಸ್ತರಿಗೆ ಮರಳಿ ತಲುಪಿದೆ. ಸೈಬರ್ ಅಪರಾಧ ಘಟಕಗಳು, ಪೊಲೀಸ್ ಇಲಾಖೆ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಹಾಗೂ ಸಂಬಂಧಿತ ಇಲಾಖೆಗಳ ನಡುವಿನ ಸಮನ್ವಯವನ್ನು ಬಲಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಇತ್ತೀಚೆಗೆ ವಿಧಾನಸಭೆಗೆ ತಿಳಿಸಿದ್ದರು.

ತನಿಖಾಧಿಕಾರಿಗಳಿಗೆ ಅಗತ್ಯವಿರುವ ದಾಖಲೆಗಳನ್ನು ಹಣಕಾಸು ಸಂಸ್ಥೆಗಳು ಯಾವುದೇ ವಿಳಂಬವಿಲ್ಲದೆ ಒದಗಿಸುವಂತೆ ಮಾಡುವುದು ಸಮನ್ವಯದ ಪ್ರಮುಖ ಉದ್ದೇಶವಾಗಿದೆ. ಜತೆಗೆ ಬಾಕಿ ಪ್ರಕರಣಗಳ ಪರಿಶೀಲನೆ, ವಿಳಂಬಕ್ಕೆ ಕಾರಣಗಳ ಪರಾಮರ್ಶೆ ಹಾಗೂ ದೀರ್ಘಕಾಲದಿಂದ ನನೆಗುದಿಗೆ ಬಿದ್ದಿರುವ ಪ್ರಕರಣಗಳಿಗೆ ಆದ್ಯತೆ ನೀಡಿ ನಿಯತಕಾಲಿಕವಾಗಿ ಪರಿಶೀಲನೆ ನಡೆಸುವುದಾಗಿ ಸರ್ಕಾರ ಭರವಸೆ ನೀಡಿದೆ.

ಸೈಬರ್ ವಂಚನೆಗೆ ಬಲಿಯಾಗುವವರ ಸಂಖ್ಯೆ ಹಾಗೂ ಕಳೆದುಕೊಳ್ಳುತ್ತಿರುವ ಹಣದ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೈಬರ್ ಕಳ್ಳರ ವಿರುದ್ಧ ತ್ವರಿತ ಕ್ರಮ ಕೈಗೊಳ್ಳಲು ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಆಧುನೀಕ–ರಿಸುವುದು ಹಾಗೂ ವಂಚನೆಯಾದ ಹಣವನ್ನು ಸಾಧ್ಯವಾದಷ್ಟು ಬೇಗ ಸ್ಥಗಿತಗೊಳಿಸಿ ಸಂತ್ರಸ್ತ–ರಿಗೆ ಮರಳಿಸುವ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ.

## ಕಾಂಗ್ರೆಸ್ ಹೆಸರು ಹೇಳಿಕೊಂಡು ಜೆಡಿಎಸ್ ಅಸ್ತಿತ್ವ ಉಳಿಸಿಕೊಳ್ಳುವ ದಾರಿದ್ರ್ಯ ನಮಗಿಲ್ಲ : ಹೆಚ್ಡಿಕೆ

ಮಂಡ್ಯ: ಕಾಂಗ್ರೆಸ್ ಹೆಸರು ಹೇಳಿಕೊಂಡು ಜೆಡಿಎಸ್ ಅಸ್ತಿತ್ವ ಉಳಿಸಿಕೊಳ್ಳುವ ದಾರಿದ್ರ್ಯ ನಮಗೆ ಬಂದಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮನ್ನು ಕಾಪಾಡುವ ವಂಶಸ್ಥರ ಹೆಸರನ್ನು ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದೀರಿ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. "ನನ್ನ ಅಸ್ತಿತ್ವದ ಬಗ್ಗೆ ಪ್ರಶ್ನಿಸುವ ನೀವು ತಮಿಳುನಾಡಿನಲ್ಲಿ ಯಾವ ಸಿದ್ಧಾಂತ ಹೊಂದಿದ್ದೀರಿ? 2018ರಲ್ಲಿ ನಮ್ಮ ಮನೆ ಬಾಗಿಲಿಗೆ ನೀವು ಬಂದಾಗ ಯಾವ ಸಿದ್ಧಾಂತವಿತ್ತು? ಕೆಪಿಎಸ್‌ಸಿ ನೇಮಕಾತಿ ಹಗರಣದ ಕುರಿತು ದಾಖಲೆ ಸಹಿತ ಮಾಡಿರುವ ಆರೋಪಗಳಿಗೆ ಮೊದಲು ಉತ್ತರ ನೀಡಿ" ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದರು.



ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನೇಮಕಾತಿಗೆ ಸಂಬಂಧಿಸಿದಂತೆ ತಾವು ಆರೋಪ ಮಾಡಿಲ್ಲ. ನಡೆದಿರುವ ಅಕ್ರಮಗಳನ್ನು ದಾಖಲೆ ಸಹಿತ ಬಹಿರಂಗಪಡಿಸಿದ್ದೇನೆ. ಅಕ್ರಮ ಸಾಬೀತಾಗಿರುವ ದಾಖಲೆಗಳಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ ಕುಳಿತಿದೆ. ದಾಖಲೆಗಳೊಂದಿಗೆ ತಾವು ಮಾಡಿರುವ ಆರೋಪಗಳಿಗೆ ಮೊದಲು ಉತ್ತರಿಸಲಿ ಎಂದು ಆಗ್ರಹಿಸಿದರು. ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ವರದಿ ನೀಡಿದ್ದರೂ ಸರ್ಕಾರ ಏಕೆ ಮೌನವಾಗಿದೆ? ನ್ಯಾಯಾಲಯದ ಮೊರೆ ಏಕೆ ಹೋಗಿಲ್ಲ? ಹಗರಣವನ್ನು ಮುಚ್ಚಿಹಾಕಲು ಆರೋಪಿಗಳಿಗೆ ನೇಮಕಾತಿ ಆದೇಶ ನೀಡಿ ರಕ್ಷಣೆ ಮಾಡುವುದಲ್ಲದೆ ಸಂಬಳವನ್ನೂ ನೀಡಲಾಗುತ್ತಿದೆ. ಮೊದಲು ಇದಕ್ಕೆ ಉತ್ತರಿಸಿ, ಬಳಿಕ ಸಿದ್ಧಾಂತದ ಬಗ್ಗೆ ಮಾತನಾಡಿ ಎಂದು ಕಾಂಗ್ರೆಸ್‌ಗೆ ತಿರುಗೇಟು ನೀಡಿದರು.

**ಮುಜುಗರ ತಪ್ಪಿಸಿಕೊಳ್ಳಲು ರಾಜೀನಾಮೆ**

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಬಹುಕೋಟಿ ರೂಪಾಯಿ ಅಕ್ರಮ ಹಣ ವರ್ಗಾವಣೆ ಆರೋಪದಿಂದ ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರಕ್ಕೆ ಉಂಟಾಗುವ ಮುಜುಗರ ತಪ್ಪಿಸಿಕೊಳ್ಳಲು ಬಿ. ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು. "ನನ್ನ ಮೇಲಿನ ಆರೋಪವನ್ನು 14 ವರ್ಷಗಳಿಂದ ಜೀವಂತವಾಗಿಟ್ಟಿದ್ದಾರೆ. ಅದು ರಾಜ–ಕೀಯ ಆರೋಪವೇ ಹೊರತು ಹಣ ದುರುಪಯೋಗಪಡಿಸಿಕೊಂಡ ಆರೋಪವಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ಅದನ್ನು ಮುಚ್ಚಿಹಾಕಬಹುದಿತ್ತು. ಆದರೆ ತನಿಖೆ ನಡೆಸಲಿ ಎಂದೇ ಬಿಟ್ಟಿದ್ದೇನೆ" ಎಂದು ಹೇಳಿದರು.

ಅಭಿವೃದ್ಧಿಯ ಹೆಸರಿನಲ್ಲಿ 600 ಕೋಟಿ ರೂ ಅವ್ಯವಹಾರವಾಗಿದೆ ಎಂದು ಸದನ ಸಮಿತಿ ರಚಿಸಲಾಗಿ–ತ್ತು. ಆ ವರದಿ ಎಲ್ಲಿಗೆ ಹೋಯಿತು ಎಂದು ಸಚಿವ ಎಚ್.ಸಿ. ಬಾಲಕೃಷ್ಣ ಅವರ ಹೇಳಿಕೆಗೆ ಕುಮಾರಸ್ವಾಮಿ ಪ್ರತಿಕ್ರಿಯಿಸಿದರು. ರಾಜೀನಾಮೆ ನೀಡುವುದಾಗಿ ಬಹಳಷ್ಟು ಮಂದಿ ಹೇಳಿದ್ದಾಗಿದೆ ಎಂದರು.

**ತಮಿಳುನಾಡಿಗೆ ನೀರು**

ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ. ಜಲಾಶಯ ಭರ್ತಿಯಾಗದಿದ್ದರೂ ನೀರು ಹರಿಸಲಾಗುತ್ತಿದೆ. ನೀರು ಬಿಡುತ್ತಿರುವುದನ್ನು ಪ್ರಶ್ನಿಸುವ ಧೈರ್ಯ ಸರ್ಕಾರಕ್ಕೆ ಇಲ್ಲ ಎಂದು ಕುಮಾರಸ್ವಾಮಿ ಆರೋಪಿಸಿದರು. "ಸರಿಯಾದ ಪೂರ್ವಸಿದ್ಧತೆ ಮಾಡಿಕೊಂಡು ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಾಡಬೇಕಿದೆ. ಈ ವಿಚಾರದಲ್ಲಿ ನನಗೂ ಹೇಳಿ ಸಾಕಾಗಿದೆ" ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

## ವೆನೆಜುವೆಲಾದ 65 ಶತಕೋಟಿ ಬ್ಯಾರೆಲ್ ತೈಲದ ಮೇಲೆ ಅಮೆರಿಕದ ಹಿಡಿತ : : ಟ್ರಂಪ್ ಘೋಷಣೆ



ವಾಷಿಂಗ್ಟನ್: ದಕ್ಷಿಣ ಅಮೆರಿಕದ ವೆನೆಜುವೆಲಾದ 65 ಶತಕೋಟಿ ಬ್ಯಾರೆಲ್ ತೈಲ ಸಂಗ್ರಹದ ಮೇಲೆ ನಿಯಂತ್ರಣ ಸಾಧಿಸಲು ಅಮೆರಿಕ ಒಪ್ಪಂದ ಮಾಡಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಮಾಹಿತಿ ನೀಡಿರುವ ಟ್ರಂಪ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹಾಗೂ ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರು ಒಪ್ಪಂದದ ಮಾತುಕತೆಯಲ್ಲಿ ಭಾಗವಹಿಸಿದ್ದರು ಎಂದು ತಿಳಿಸಿದ್ದಾರೆ. ಅಮೆರಿಕವು ವೆನೆಜುವೆಲಾ ಜತೆ ವಿಶ್ವ ಇತಿಹಾಸದಲ್ಲೇ ಅತಿದೊಡ್ಡ ತೈಲ ಒಪ್ಪಂದ ಮಾಡಿಕೊಂಡಿದೆ ಎಂದು ಟ್ರಂಪ್ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮದುರೊ ಅವರನ್ನು ಅಮೆರಿಕ ಸೇನಾ ಕಾರ್ಯಾಚರಣೆ ನಡೆಸಿ ಬಂಧಿಸಿ, ಮಾದಕವಸ್ತು ಕಳ್ಳಸಾಗಣೆ ಹಾಗೂ ನಾರ್ಕೊ–ಭಯೋತ್ಪಾದನೆ ಆರೋಪದಡಿ ಅಮೆರಿಕಕ್ಕೆ ಕರೆದೊಯ್ದು ಸುಮಾರು ಒಂಬತ್ತು ತಿಂಗಳ ಬಳಿಕ ಈ ಒಪ್ಪಂದದ ಘೋಷಣೆ ಹೊರಬಿದ್ದಿದೆ. ಇರಾನ್ ಯುದ್ಧ ಆರು ತಿಂಗಳು ಪೂರೈಸಿದರೂ ಅಂತ್ಯಗೊಳ್ಳುವ ಲಕ್ಷಣಗಳು ಕಾಣದ ಹಿನ್ನೆಲೆಯಲ್ಲಿ ಅಮೆರಿಕದಲ್ಲಿ ಪೆಟ್ರೋಲ್ ಬೆಲೆ ಏರಿಕೆಯಾಗುತ್ತಿರುವ ಬಗ್ಗೆ ಟ್ರಂಪ್ ಸರ್ಕಾರದ ಮೇಲೆ ಒತ್ತಡ ಹೆಚ್ಚಾಗಿದೆ. ಈ ನಡುವೆ ಅಮೆ–ರಿಕ ತನ್ನ ಕಾರ್ಯತಂತ್ರದ ಪೆಟ್ರೋಲಿಯಂ ಸಂಗ್ರಹದಿಂದ ತೈಲವನ್ನು ಬಳಸಿಕೊಂಡಿದ್ದು, ಆಗಸ್ಟ್ ಆರಂಭದಲ್ಲಿ ಅದರ ಪ್ರಮಾಣ 300 ಮಿಲಿಯನ್ ಬ್ಯಾರೆಲ್‌ಗಿಂತ ಕಡಿಮೆಯಾಗಿತ್ತು ಎಂದು ವರದಿಯಾಗಿದೆ. ವೆನೆಜುವೆಲಾ ವಿಶ್ವದಲ್ಲೇ ಅತಿದೊಡ್ಡ ತೈಲ ಸಂಗ್ರಹ ಹೊಂದಿರುವ ರಾಷ್ಟ್ರವಾಗಿದ್ದು, ಭೂಗರ್ಭದಲ್ಲಿ ಅಂದಾಜು 303 ಶತಕೋಟಿ ಬ್ಯಾರೆಲ್ ಕಚ್ಚಾ ತೈಲ ಸಂಗ್ರಹವಿದೆ. ಇದು ಜಾಗತಿಕ ತೈಲ ಸಂಗ್ರಹದ ಸುಮಾರು ಶೇ.17ರಷ್ಟಾಗಿದೆ ಎಂದು ಅಮೆರಿಕದ ಇಂಧನ ಮಾಹಿತಿ ಆಡಳಿತ ತಿಳಿಸಿದೆ. ಆದರೆ, ಹಳೆಯದಾದ ಮತ್ತು ಹದಗೆಟ್ಟಿರುವ ಮೂಲಸೌಕರ್ಯದ ಕಾರಣ ವೆನೆಜುವೆಲಾ ಪ್ರಸ್ತುತ ಜಾಗತಿಕ ತೈಲ ಉತ್ಪಾದನೆಯಲ್ಲಿ ಕೇವಲ ಶೇ.1ರಷ್ಟು ಮಾತ್ರ ಉತ್ಪಾದಿಸುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

## ಬಿಜೆಪಿ ಕುತಂತ್ರದಿಂದಾಗಿ ನಾಗೇಂದ್ರ 2 ಬಾರಿ ರಾಜೀನಾಮೆ ಕೊಡುವಂತಾಗಿದೆ : ಪರಮೇಶ್ವರ್

ಬೆಂಗಳೂರು: ಸಚಿವ ಸ್ಥಾನಕ್ಕೆ ಬಿ. ನಾಗೇಂದ್ರ ರಾಜೀನಾಮೆ ನೀಡುವ ಅಗತ್ಯ ಇರಲಿಲ್ಲ. ಬಿಜೆಪಿಯವರ ಕುತಂತ್ರದಿಂದಾಗಿ ಅವರು ಎರಡು ಬಾರಿ ರಾಜೀನಾಮೆ ನೀಡುವಂತಾಗಿದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಜನತಾ ನ್ಯಾಯಾಲಯದ ಮುಂದೆ ಕಾಂಗ್ರೆಸ್ ವಸ್ತುಸ್ಥಿತಿಯನ್ನು ಮಂಡಿಸಲಿದೆ ಎಂದು ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.ಮೈಸೂ–ರಿನಲ್ಲಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದ ಬಳಿಕ ಪಕ್ಷದ ಕಾರ್ಯಕರ್ತರ ಮನೆಗೆ ಭೇಟಿ ನೀಡಿದ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

**ಜ್ಯೋತಿಷ್ಯ ಮತ್ತು ಭವಿಷ್ಯಫಲ ಸಲಹೆ ಪಡೆಯುವುದು**

ಯಾವುದೇ ಅಪರಾಧ ಮಾಡದಿದ್ದರೂ ನಾಗೇಂದ್ರ ಅವರು ಎರಡು ಬಾರಿ ರಾಜೀನಾಮೆ ನೀಡುವಂತೆ ಬಿಜೆಪಿಯವರು ಮಾಡಿದ್ದಾರೆ ಎಂದು



ಆಕ್ರೋಶ ವ್ಯಕ್ತಪಡಿಸಿದ ಅವರು, ಪಕ್ಷ, ಸರ್ಕಾರ ಹಾಗೂ ಮುಖಂಡರಿಗೆ ಮುಜುಗರವಾಗಬಾರದು ಎಂಬ ಕಾರಣ–ಕ್ಕೆ ಶಿಸ್ತಿನ ಸಿಪಾಯಿಯಂತೆ ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಆದರೆ, ಅದರ ಅಗತ್ಯ ಖಂಡಿತ ಇರಲಿಲ್ಲ ಎಂದರು. ಸಿಬಿಐ ಅಥವಾ ಜಾರಿ ನಿರ್ದೇಶನಾಲಯದ ತನಿಖೆಯಲ್ಲಾಗಲಿ ನಾಗೇಂದ್ರ ಅವರ ಹೆಸರು ಎಲ್ಲಿಯೂ ಪ್ರಸ್ತಾಪವಾಗಿರಲಿಲ್ಲ. ಅವ–ರಿಂದ ಯಾವುದೇ ಹಣ ವಸೂಲಾಗಿರಲಿಲ್ಲ. ತಾವು ಹಿಂದೆ ಗೃಹ ಸಚಿವರಾಗಿದ್ದಾಗಲೇ ದುರುಪಯೋಗವಾಗಿದ್ದ 84 ಕೋಟಿ ರೂ. ಮರುವಸೂಲಿ ಕಾರ್ಯ ಆರಂಭವಾಗಿ–ತ್ತು. ಈ ಪೈಕಿ 79 ಕೋಟಿ ರೂ. ವಾಪಸ್ ಪಡೆಯಲಾಗಿದ್ದು, ಇನ್ನೂ 5 ಕೋಟಿ ರೂ. ಬಾಕಿ ಇದೆ ಎಂದು ತಿಳಿಸಿದರು.

"ಎಲ್ಲಿಯೂ ನಾಗೇಂದ್ರ ಅವರ ಹೆಸರು ಕೇಳಿಬರಲಿಲ್ಲ. ಸಿಬಿಐನ ದೋಷಾರೋಪಣಾ ಪಟ್ಟಿಯಲ್ಲೂ ಅವರ ಹೆಸರು ಇರಲಿಲ್ಲ. ಅನಾವಶ್ಯಕವಾಗಿ ಆರೋಪ ಮಾಡಿ ಬಿಜೆಪಿಯವರು ನಾಗೇಂದ್ರ ರಾಜೀನಾಮೆ ನೀಡುವಂತೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ವಸ್ತುಸ್ಥಿತಿಯನ್ನು ಜನಸಾಮಾನ್ಯರಿಗೆ ತಿಳಿಸುತ್ತೇವೆ" ಎಂದು ಹೇಳಿದರು.

ನಾಗೇಂದ್ರ ಅವರು ಎರಡು ಬಾರಿ ರಾಜೀನಾಮೆ ನೀಡಿರುವುದ–ರಿಂದ ಸರ್ಕಾರಕ್ಕೆ ಮುಜುಗರವಾಗಿರುವುದು ನಿಜ. ಅದಕ್ಕಾಗಿಯೇ ವಿಧಾನಸಭೆಯಲ್ಲಿ ನೋಟಿಸ್ ನೀಡಿ ಚರ್ಚೆಗೆ ಅವಕಾಶ ಕಲ್ಪಿಸುವಂತೆ ವಿರೋಧ ಪಕ್ಷಗಳಿಗೆ ಹಲವು ಬಾರಿ ಹೇಳಿದ್ದೆವು. ಅವರ ಬಳಿ ಇರುವ ಸಾಕ್ಷ್ಯಗಳನ್ನು ಸದನದಲ್ಲಿ ಮಂಡಿಸುವಂತೆ ಸವಾಲು ಹಾಕಿದ್ದೆವು. ಸರ್ಕಾರವೂ ಅದಕ್ಕೆ ಉತ್ತರಿಸಲು ಸಿದ್ಧವಿತ್ತು. ಆದರೆ, ವಿರೋಧ ಪಕ್ಷಗಳು ಅದ್ಯಾವುದನ್ನೂ ಮಾಡದೆ ರಾಜ–ಕೀಯ ಮಾಡುವುದರಲ್ಲೇ ಕಾಲಹರಣ ಮಾಡಿವೆ ಎಂದು ತಿರುಗೇಟು ನೀಡಿದರು. ಮುಂದಿನ ದಿನಗಳಲ್ಲಿ ಈ ವಿಚಾರವನ್ನು ಕಾಂಗ್ರೆಸ್ ಸಮರ್ಥವಾಗಿ ಎದುರಿಸಲಿದೆ ಎಂದು ಪರಮೇಶ್ವರ್ ಹೇಳಿದರು.

# ಅತಿಯಾದ ಆಲೋಚನೆ..,ಬೇಡವೇ ಬೇಡ

ಶೇಕಡ 90 ಕ್ಕಿಂತಲೂ ಹೆಚ್ಚು ಜನ ತಮ್ಮಲ್ಲಿ ನಿಜವಾದ ಸಾಮರ್ಥ್ಯ ಇದ್ದಾಗಲೂ ಕೂಡ ತಾವು ತಲುಪಬೇಕಾದ ಗುರಿಯನ್ನು ತಲುಪಲು ಸಾಧ್ಯವಾಗದೆ ಒದ್ದಾಡುತ್ತಾರೆ. ಅವರಲ್ಲಿ ಪ್ರತಿಭೆಯ ಕೊರತೆ ಇರುವುದಿಲ್ಲ... ಆದರೆ ಅವರ ಅತಿಯಾದ ಯೋಚನೆಯೇ ಅವರ ಶತ್ರು ವಾಗಿರುತ್ತದೆ.



ಬಹಳಷ್ಟು ಬಾರಿ ಒಂದು ವಿಷಯದ ಕುರಿತು ವಿಪರೀತ ಗೊಂದಲಕ್ಕೆ ಬಿದ್ದು ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಮೀನ –ಮೇಷ ಎಣಿಸುವ ಜನರು ತಮಗೆ ಬದುಕಿನಲ್ಲಿ ದೊರೆಯುವ ನೂರೆಂಟು ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ. ಇದಕ್ಕೆ ಬೇರಾರೂ ಕಾರಣವಲ್ಲ..... ಖುದ್ದು ಅವರ ಅತಿಯಾದ ಗೊಂದಲ ಹಾಗೂ ಯೋಚನೆಗಳು ಅವರಿಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಬಿಡುವುದಿಲ್ಲ. ಅತಿಯಾದ ಯೋಚನೆಯಿಂದಾಗಿ ನಾವು ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ. ಅವುಗಳಲ್ಲಿ ಮುಖ್ಯವಾದವು ಹೀಗಿವೆ. *ಅವಕಾಶಗಳು... ಉತ್ತಮ ಅವಕಾಶಗಳು ನಮ್ಮ ಬದುಕಿನ ಬಾಗಿಲನ್ನು ತಟ್ಟುವಾಗ ಅವುಗಳನ್ನು ಉಳಿಸಿ ಬಳಸಿಕೊಳ್ಳುವ ಬದಲು,ಆ ಸಮಯದಲ್ಲಿ ತೀವ್ರವಾದ ಯೋಚನೆ ಮಾಡುತ್ತಾ ಇದ್ದರೆ ಅವಕಾಶಗಳು ತಪ್ಪಿ ಹೋಗುವ ಸಾಧ್ಯತೆಗಳು ಬಹಳ. ಸಮಯದ ಸೋರಿಕೆ.... ವಿಪರೀತ ಯೋಚನೆಗಳು ನಮ್ಮ ಸಮಯವನ್ನು ವೃಥಾ ಹಾಳು ಮಾಡುತ್ತವೆ. ಯೋಚಿಸುವುದರಲ್ಲಿ ಸಮಯವನ್ನು ಕಳೆದರೆ ಅವಕಾಶಗಳು ತಪ್ಪಿ ಹೋಗುವುದಲ್ಲದೆ ಆಗಬೇಕಾದ ಕೆಲಸಗಳು ಕೂಡ ಯೋಚನೆಯಲ್ಲಿಯೇ ಕಳೆದು ಹೋಗಿ ಬಿಡುತ್ತದೆ. ಗಂಟೆಗಟ್ಟಲೆ ಯೋಚಿಸುತ್ತ ಕುಳಿತರೆ ಸಮಯ ಸರಿಯುತ್ತದೆಯೇ ಹೊರತು ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ತಡವಾದ ನಿರ್ಣಯಗಳು....

ಪ್ರತಿಯೊಂದು ತಡವಾದ ನಿರ್ಣಯವು ತನ್ನದೇ ಆದ ರೀತಿಯಲ್ಲಿ ಕಂದಾಯ ಕಟ್ಟಿಸಿಕೊಳ್ಳುತ್ತದೆ. ಹಾಗೆ ಮಾಡಿದ ಪ್ರತಿಯೊಂದು ಆಯ್ಕೆಯೂ ಅಸಾಧ್ಯವೆಂದು ತೋರುತ್ತದೆ. ಸಮರ್ಥರಾಗಿದ್ದು ಕೂಡ ತಲುಪಬೇಕಾದ ಗುರಿ ಮುಟ್ಟುವುದು ಅಸಾಧ್ಯವಾಗುತ್ತದೆ. ವಿಳಂಬ ಪ್ರವೃತ್ತಿ... ಅತಿಯಾದ ಯೋಚನೆಯ ಪರಿಣಾಮವಾಗಿ ಉಂಟಾಗುವ ವಿಳಂಬ ಪ್ರವೃತ್ತಿಯಿಂದಾಗಿ ಸರಿಯಾದ ಸಮಯಕ್ಕೆ ಕೆಲಸ ಮಾಡಲು ಕೂಡ ಸಾಧ್ಯವಾಗುವುದಿಲ್ಲ.ಎಲ್ಲಾ ಸಮಯದಲ್ಲಿಯೂ ಎಲ್ಲವನ್ನೂ ಮಾಡಲು ಸಾಧ್ಯವಾಗುವುದಿಲ್ಲ ಆದರೆ ಕೆಲ ನಿರ್ದಿಷ್ಟ ಗುರಿ ತಲುಪುವ ಕೆಲಸಗಳಿಗೆ ಸಮಯದ ಮಿತಿ ಹಾಕಿಕೊಂಡು ಖಂಡಿತವಾಗಿಯೂ ಅದನ್ನು ಉಪಯೋಗಿಸಬೇಕು.. ಒಂದೆಡೆ ಅಬ್ದುಲ್ ಕಲಾಮ್ ಅವರು ಹೀಗೆ ಹೇಳುತ್ತಾರೆ ಅವರು 'ವರ್ಲ್ಡ್ ಈಸ್ ನಾಟ್ ಸಫರಿಂಗ್ ಫ್ರಮ್ ಮನಿ, ಬಟ್ ಇಟ್ ಇಸ್ ಸಫರಿಂಗ್ ಫ್ರಂ ದ ಸೈಲೆನ್ಸ್ ಆಫ್ ಮೆನಿ' ಎಂದು. ಕಲಾಮ್ ಅವರ ಈ ಮಾತನ್ನು ನಮ್ಮ ಬದುಕಿಗೆ ಹೋಲಿಸಿದಾಗ ವಾಸ್ತವದ,ಸತ್ಯದ ಅರಿವು ನಮಗಾಗುತ್ತದೆ.

ಹಣದ ಕೊರತೆಯಿಂದ ಬಳಲುವುದಕ್ಕಿಂತ ಒಳ್ಳೆಯ ಆಲೋಚನೆಗಳ ಕೊರತೆಯಿಂದ ನಾವು ಬಳಲುತ್ತಿದ್ದೇವೆ. ಯಾವುದೇ ಒಂದು ವಿಷಯವನ್ನು ನಮ್ಮ ಮುಂದೆ ಇಟ್ಟಾಗ ನಮಗೆ ಅದರಲ್ಲಿ ಧನಾತ್ಮಕ ಅಂಶಗಳಿಗಿಂತ ಋಣಾತ್ಮಕ ಅಂಶಗಳೇ ಹೆಚ್ಚು ಗೋಚರಿಸಿದರೆ ನಾವು ಎಲ್ಲೋ ಒಂದು ಕಡೆ ವಿಪರೀತ ಯೋಚಿಸುತ್ತಿದ್ದೇವೆ ಎಂದು ಅರ್ಥ. ಬದುಕು ನಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಇರುವುದಿಲ್ಲ ಕ್ಯಾಲ್ಕುಲೇಟೆಡ್ ರಿಸ್ಕ್ ಎಂದು ಹೇಳುವ ಒಂದಷ್ಟು ಆಕಸ್ಮಿಕ ಅವಘಡಗಳನ್ನು ಎದುರಿಸಲು ನಾವು ಸದಾ ಸಜ್ಜಾಗಿರಬೇಕು ಹೊರತು ಅವುಗಳು ಬರಲೇಬಾರದು ಎಂಬಂತೆ ಭಯಪಟ್ಟು ಆ ಕೆಲಸವನ್ನು ಮಾಡದೇ ಇರುವುದು ಜಾಣ್ಮೆಯ ಲಕ್ಷಣವಲ್ಲ. ಅಯ್ಯೋ! ನಡೆದರೆ ಎಡವಿ ಬಿಡುತ್ತೇವೆ ಎಂಬ ಭಯದಿಂದ ಯಾರಾದರೂ ಸುಮ್ಮನೆ ಕುಳಿತುಕೊಂಡಿದ್ದರೆ ಈ ಜಗತ್ತಿನಲ್ಲಿ ಹೆಳವರ ಸಂಖ್ಯೆಯೇ ಹೆಚ್ಚಾಗುತ್ತಿತ್ತು. ಪ್ರಸ್ತುತ ದಿನಮಾನಗಳಲ್ಲಿ ಮಾನಸಿಕ ಹೆಳವಿಕೆ ನಮ್ಮಲ್ಲಿ ಹೆಚ್ಚಲು ಕಾರಣ ನಮ್ಮ ಅತಿಯಾದ ನಕಾರಾತ್ಮಕ ಯೋಚನೆಗಳು. ಈ ನಕಾರಾತ್ಮಕ ಯೋಚನೆಗಳಿಂದ ಬಿಡುಗಡೆ ಪಡೆಯುವುದು ಹೇಗೆ ಖಂಡಿತವಾಗಿಯೂ ಸಾಧ್ಯವಿದೆ. ಪ್ರಾಚೀನ ಕಾಲದಿಂದಲೂ ನಮ್ಮ ಹಿರಿಯರು ನಮಗೆ ಎಲ್ಲವನ್ನು ಧನಾತ್ಮಕ ದೃಷ್ಟಿಯಿಂದ ನೋಡಲು ಹೇಳಿಕೊಟ್ಟಿದ್ದಾರೆ. ಕೆಲವು ಉದಾಹರಣೆಗಳನ್ನೇ ಹೇಳುವುದಾದರೆ ಹಾಲು ಉಕ್ಕುವುದು ಶುಭ ಸಂಕೇತ ಎಂದು ಹೇಳುವ ನಮ್ಮ ಹಿರಿಯರು ಮನೆಯಲ್ಲಿ ಯಾವುದಾದರೂ ವಸ್ತುಗಳು ಇಲ್ಲದೆ ಹೋದಾಗಲೂ ಕೂಡ ಅವುಗಳು ಹೆಚ್ಚಿವೆ ಎಂದು ಹೇಳುತ್ತಾರೆಯೇ ಹೊರತು ಖಾಲಿಯಾಗಿದೆ ಎಂದು ಹೇಳುವುದಿಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಸಕಾರಾತ್ಮಕತೆಯನ್ನು ಕಾಣುವ ನಮ್ಮ ಹಿರಿಯರ ಬದುಕನ್ನು ನಾವು ಕೂಡ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅತಿಯಾದ ಆಲೋಚನೆಗಳನ್ನು ಕೈಬಿಡಲು ಕೆಲ ಸಲಹೆಗಳು ಹೀಗಿವೆ ನಿಮ್ಮ ಮೇಲೆ, ನಿಮ್ಮ ಕಾರ್ಯ ಚಟುವಟಿಕೆಗಳ ಮೇಲೆ ಮಿತಿಯನ್ನು ಹೇರುವ ನಂಬಿಕೆಗಳನ್ನು, ಮೌಲ್ಯಗಳನ್ನು ಕೊಂಚ ಅವಲೋಕಿಸಿ. ಪ್ರತಿಯೊಂದರಲ್ಲೂ ಎರಡು ಆಯ್ಕೆಗಳಿದ್ದು ಇದ್ದುದರಲ್ಲೇ ಉತ್ತಮವಾದ ಆಯ್ಕೆಯನ್ನು ನಿಮ್ಮದಾಗಿಸಿಕೊಳ್ಳಿ. ನಿಮ್ಮ ಮಾತು ನಡವಳಿಕೆ ಹಾಗೂ ಉದ್ದೇಶಗಳಲ್ಲಿ ಸ್ಪಷ್ಟತೆ ಇರಲಿ. ಭಾವನಾತ್ಮಕ ಗಟ್ಟಿತನ ನಿಮ್ಮದಾಗಿದ್ದು ನೀವು ಮಾಡುತ್ತಿರುವ ಕೆಲಸವನ್ನು ಸಮರ್ಥಿಸಿಕೊಳ್ಳುವಷ್ಟು ಆತ್ಮ ವಿಶ್ವಾಸದಿಂದ ಕಾರ್ಯನಿರ್ವಹಿಸಿ. ಬದುಕಿನಲ್ಲಿ ಉತ್ತಮ ಯಶಸ್ಸನ್ನು ಬೆಳೆಸಲು ಉನ್ನತವಾದ ಧ್ಯೇಯ ಉದ್ದೇಶಗಳನ್ನು ಹೊಂದಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರಿ. ನಿಮ್ಮೊಳಗಿನ ಆಂತರಿಕ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ನಿಮ್ಮ ಆಲೋಚನೆಗಳು ವೈಜ್ಞಾನಿಕವಾಗಿ ಹಾಗೂ ವಾಸ್ತವದ ನೆಲೆಗಟ್ಟಿನ ಮೇಲೆ ನಿಂತಿರಲಿ.

ನಿಮ್ಮ ಧ್ಯೇಯೋದ್ದೇಶಗಳಿಗೆ ಸಹಕಾರಿಯಾಗುವಂತೆ ನಿಮ್ಮ ಯೋಚನಾ ವಿಧಾನ ಹಾಗೂ ಬದುಕುವ ವಿಧಾನಗಳನ್ನು ರೂಡಿಸಿಕೊಳ್ಳಿ. ಇನ್ನು ಮುಖ್ಯವಾಗಿ ಎಲ್ಲವನ್ನೂ ನಕಾರಾತ್ಮಕವಾಗಿ ನೋಡುವ ಕಾಲೆಳೆಯುವ ಜನರ ಸಹವಾಸದಿಂದ ದೂರವಾಗಿರಿ. 15 ರ ಹರೆಯದ ವಿದ್ಯಾರ್ಥಿಗಳೇ ಆಗಿರಲಿ 60 ವರ್ಷ ದಾಟಿದ ವೃದ್ಧರೆ ಆಗಿರಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಬದುಕಿನ ನೀತಿ ನಿಲುವುಗಳು ಇದ್ದು ಅವುಗಳನ್ನು ಒಂದು ಉನ್ನತ ಗುರಿಯತ್ತ ಕೊಂಡೊಯ್ಯಲು ಪ್ರಯತ್ನಿಸಿ. ನಿಮಗೆ ನೀವೇ ಮಿತಿಯಾಗದಿರಿ. ನಿಮ್ಮನ್ನು ಕಟ್ಟಿ ಹಾಕುವ ಮಿತಿಗಳನ್ನು ಮೀರಿ ಬೆಳೆಯಿರಿ ಸಾಧಿಸಿ ಮತ್ತೊಬ್ಬರಿಗೆ ಸ್ಫೂರ್ತಿಯಾಗಿರಿ.




ವೀಣಾ ಹೇಮಂತ್ ಗೌಡ ಪಾಟೀಲ್

# ಮನೆಯ ಹೊಸ್ತಿಲು ಪೂಜೆ ಏಕೆ ಮಾಡಬೇಕು

ಸಂಪ್ರದಾಯದ ಹಿಂದೆ ಅಡಗಿರುವ ನಂಬಿಕೆ, ಗೌರವ ಮತ್ತು ಸಕಾರಾತ್ಮಕತೆಯ ಸಂದೇಶ

ಮನೆ ಎಂದರೆ ಕೇವಲ ನಾಲ್ಕು ಗೋಡೆಗಳಿಂದ ನಿರ್ಮಾಣವಾದ ಕಟ್ಟಡವಲ್ಲ. ಅದು ಕುಟುಂಬದ ಸದಸ್ಯರ ಪ್ರೀತಿ, ನೆಮ್ಮದಿ, ಭದ್ರತೆ, ಸಂಸ್ಕೃತಿ ಮತ್ತು ಭಾವನೆಗಳನ್ನು ಒಳಗೊಂಡಿರುವ ಒಂದು ಪವಿತ್ರ ತಾಣ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮನೆಯ ಪ್ರತಿಯೊಂದು ಭಾಗಕ್ಕೂ ತನ್ನದೇ ಆದ ಮಹತ್ವವಿದೆ. ಅದರಲ್ಲೂ ಮನೆಯ ಹೊಸ್ತಿಲು ಅಥವಾ ವಾಸಿಲು ಅತ್ಯಂತ ವಿಶೇಷ ಸ್ಥಾನವನ್ನು ಹೊಂದಿದೆ. ಮನೆಗೆ ಹೊರಗಿನಿಂದ ಪ್ರವೇಶಿಸುವ ಮತ್ತು ಮನೆಯೊಳಗಿನಿಂದ ಹೊರಗೆ ಹೋಗುವ ಪ್ರಮುಖ ದ್ವಾರವಾಗಿರುವ ಹೊಸ್ತಿಲನ್ನು ಪವಿತ್ರವೆಂದು ಪರಿಗಣಿಸಿ ಅನೇಕ ಮನೆಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಪೂಜೆ ಸಲ್ಲಿಸುವ ಸಂಪ್ರದಾಯ ಇಂದಿಗೂ ಮುಂದುವರಿದಿದೆ.



**ಹೊಸ್ತಿಲು ಎಂದರೇನು**

ಮನೆಯ ಪ್ರವೇಶದ್ವಾರದ ಕೆಳಭಾಗದಲ್ಲಿರುವ ಮರ, ಕಲ್ಲು ಅಥವಾ ಇತರ ವಸ್ತುಗಳಿಂದ ನಿರ್ಮಿಸಿರುವ ಭಾಗವನ್ನು ಸಾಮಾನ್ಯವಾಗಿ ಹೊಸ್ತಿಲು ಎಂದು ಕರೆಯಲಾಗುತ್ತದೆ. ಹಿಂದಿನ ಕಾಲದಲ್ಲಿ ಮನೆಯ ಹೊಸ್ತಿಲಿಗೆ ವಿಶೇಷ ಗೌರವ ನೀಡಲಾಗುತ್ತಿತ್ತು. ಮನೆಗೆ ಬರುವ ಪ್ರತಿಯೊಬ್ಬರೂ ಹೊಸ್ತಿಲನ್ನು ದಾಟಿಯೇ ಒಳಗೆ ಪ್ರವೇಶಿಸುವುದರಿಂದ, ಅದು ಮನೆಯ ಒಳಭಾಗ ಮತ್ತು ಹೊರಜಗತ್ತಿನ ನಡುವಿನ ಗಡಿಯ ಸಂಕೇತವಾಗಿತ್ತು. ನಮ್ಮ ಹಿರಿಯರು ಹೊಸ್ತಿಲನ್ನು ಕಾಲಿನಿಂದ ತುಳಿಯಬಾರದು, ಅದರ ಮೇಲೆ ಕುಳಿತುಕೊಳ್ಳಬಾರದು ಎಂದು ಹೇಳುತ್ತಿದ್ದರು. ಇದರ ಹಿಂದೆ ಹೊಸ್ತಿಲನ್ನು ಮನೆಯ ಗೌರವ ಮತ್ತು ಪಾವಿತ್ರ್ಯದ ಸಂಕೇತವಾಗಿ ಕಾಣುವ ಸಂಸ್ಕೃತಿ ಇತ್ತು.

**ಹೊಸ್ತಿಲು ಪೂಜೆ ಮಾಡುವುದೇಕೆ**

ಹೊಸ್ತಿಲು ಪೂಜೆ ಮಾಡುವುದಕ್ಕೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರಣಗಳಿವೆ. ಮನೆಯ ಪ್ರವೇಶದ್ವಾರವನ್ನು ಶುಭವಾಗಿಟ್ಟುಕೊಂಡರೆ ಮನೆಯಲ್ಲಿ ಸದಾ ಒಳ್ಳೆಯ ಶಕ್ತಿ, ಸಂತೋಷ ಮತ್ತು ಸಮೃದ್ಧಿ ನೆಲೆಸುತ್ತದೆ ಎಂಬ ನಂಬಿಕೆ ಜನರಲ್ಲಿ ಇದೆ. ವಿಶೇಷವಾಗಿ ಹಬ್ಬ-ಹರಿದಿನಗಳು, ಮದುವೆ, ಗೃಹಪ್ರವೇಶ, ವರಮಹಾಲಕ್ಷ್ಮಿ ಪೂಜೆ, ದೀಪಾವಳಿ, ಯುಗಾದಿ ಮುಂತಾದ ಶುಭ ಸಂದರ್ಭಗಳಲ್ಲಿ ಹೊಸ್ತಿಲಿಗೆ ಅರಿಶಿನ, ಕುಂಕುಮ, ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸುವ ಪದ್ಧತಿ ಇದೆ.

**ಲಕ್ಷ್ಮಿಯ ಪ್ರವೇಶದ ಸಂಕೇತ**

ಹಿಂದೂ ಸಂಪ್ರದಾಯದಲ್ಲಿ ಮನೆಯ ಪ್ರವೇಶದ್ವಾರವನ್ನು ಲಕ್ಷ್ಮಿಯ ಆಗಮನದ ದ್ವಾರವೆಂದು ಭಾವಿಸಲಾಗುತ್ತದೆ. ಸ್ವಚ್ಛವಾದ ಮನೆ, ಅಲಂಕರಿಸಿದ ಹೊಸ್ತಿಲು, ರಂಗೋಲಿ ಮತ್ತು ದೀಪಗಳು ಶುಭದ ಸಂಕೇತಗಳೆಂದು ಪರಿಗಣಿಸಲಾಗುತ್ತದೆ. ಮನೆಯ ಹೊಸ್ತಿಲನ್ನು ಸ್ವಚ್ಛಗೊಳಿಸಿ ಅರಿಶಿನ-ಕುಂಕುಮ ಹಚ್ಚಿ, ಹೂವುಗಳಿಂದ ಅಲಂಕರಿಸಿ ದೀಪ ಬೆಳಗಿಸುವುದರಿಂದ ದೇವಿಯ ಕೃಪೆ ದೊರೆಯುತ್ತದೆ ಮತ್ತು ಮನೆಯಲ್ಲಿ ಧನ-ಧಾನ್ಯ, ಸಂತೋಷ ಹಾಗೂ ಸಮೃದ್ಧಿ ಹೆಚ್ಚುತ್ತದೆ ಎಂಬುದು ಧಾರ್ಮಿಕ ನಂಬಿಕೆ.

**ಅರಿಶಿನ ಮತ್ತು ಕುಂಕುಮದ ಮಹತ್ವ**

ಹೊಸ್ತಿಲು ಪೂಜೆಯಲ್ಲಿ ಅರಿಶಿನ ಮತ್ತು ಕುಂಕುಮಕ್ಕೆ ವಿಶೇಷ ಸ್ಥಾನವಿದೆ. ಅರಿಶಿನವನ್ನು ಮಂಗಳದ ಸಂಕೇತವಾಗಿ ಹಾಗೂ ಕುಂಕುಮವನ್ನು ಶುಭದ ಸಂಕೇತವಾಗಿ ಕಾಣಲಾಗುತ್ತದೆ. ಅರಿಶಿನ-ಕುಂಕುಮ ಹಚ್ಚಿ ಹೊಸ್ತಿಲನ್ನು ಅಲಂಕರಿಸುವುದು ಮನೆಯಲ್ಲಿನ ಶುಭಕಾರ್ಯಗಳಿಗೆ ಸಂಕೇತವಾಗಿದೆ. ಹೂವು, ದೀಪ ಮತ್ತು ರಂಗೋಲಿಯೊಂದಿಗೆ ಹೊಸ್ತಿಲನ್ನು ಅಲಂಕರಿಸುವುದರಿಂದ ಮನೆಯ ಪ್ರವೇಶದ್ವಾರ ಸುಂದರವಾಗುವುದಷ್ಟೇ ಅಲ್ಲದೆ, ಮನೆಯವರ ಮನಸ್ಸಿನಲ್ಲೂ ಹಬ್ಬದ ವಾತಾವರಣ ಮತ್ತು ಸಂತೋಷ ಮೂಡುತ್ತದೆ.

**ರಂಗೋಲಿಯೂ ಒಂದು ಸಂಸ್ಕೃತಿ**

ಹೊಸ್ತಿಲಿನ ಮುಂದೆ ರಂಗೋಲಿ ಹಾಕುವುದು ನಮ್ಮ ಸಂಸ್ಕೃತಿಯ ಪ್ರಮುಖ ಭಾಗವಾಗಿದೆ. ಬೆಳಗಿನ ಜಾವ ಮನೆಯ ಮುಂದೆ ರಂಗೋಲಿ ಹಾಕುವುದು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ರಂಗೋಲಿ ಮನೆಯ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ಶುಭದ ಸಂಕೇತವಾಗಿಯೂ ಪರಿಗಣಿಸಲಾಗುತ್ತದೆ. ವಿವಿಧ ಬಣ್ಣಗಳು, ಚುಕ್ಕಿಗಳು ಮತ್ತು ಆಕೃತಿಗಳ ಮೂಲಕ ಮನೆಯ ಮುಂದೆ ಸುಂದರ ವಿನ್ಯಾಸಗಳನ್ನು ಬಿಡಿಸುವುದು ಮಹಿಳೆಯರ ಸೃಜನಶೀಲತೆಯನ್ನೂ ಪ್ರತಿಬಿಂಬಿಸುತ್ತದೆ.

**ಸ್ವಚ್ಛತೆಯ ಸಂದೇಶವೂ ಇದೆ**

ಹೊಸ್ತಿಲು ಪೂಜೆಯ ಹಿಂದೆ ಕೇವಲ ಧಾರ್ಮಿಕ ನಂಬಿಕೆ ಮಾತ್ರವಲ್ಲ, ಸ್ವಚ್ಛತೆಯ ಮಹತ್ವವೂ ಅಡಗಿದೆ. ಮನೆಯ ಪ್ರವೇಶದ್ವಾರವನ್ನು ಪ್ರತಿದಿನ ಸ್ವಚ್ಛವಾಗಿಡುವುದು ಆರೋಗ್ಯ ಮತ್ತು ನೈರ್ಮಲ್ಯದ ದೃಷ್ಟಿಯಿಂದಲೂ ಉತ್ತಮ. ಹಬ್ಬದ ಸಂದರ್ಭದಲ್ಲಿ ಹೊಸ್ತಿಲನ್ನು ತೊಳೆದು, ಅಲಂಕರಿಸಿ, ದೀಪ ಬೆಳಗಿಸುವ ಮೂಲಕ ಮನೆಯ ಪ್ರವೇಶದ್ವಾರವನ್ನು ಸ್ವಚ್ಛವಾಗಿಡುವ ಅಭ್ಯಾಸ ಬೆಳೆಸಿಕೊಳ್ಳಲಾಗುತ್ತದೆ. ಹೀಗಾಗಿ ಸಂಪ್ರದಾಯದ ಜೊತೆಗೆ ಸ್ವಚ್ಛತೆಯ ಸಂದೇಶವೂ ಇದರಲ್ಲಿ ಅಡಗಿದೆ.

**ಕುಟುಂಬದ ನೆಮ್ಮದಿಗೆ ಸಂಕೇತ**

ಮನೆಯ ಹೊಸ್ತಿಲು ಕುಟುಂಬದ ಸದಸ್ಯರನ್ನು ಹೊರಜಗತ್ತಿನೊಂದಿಗೆ ಸಂಪರ್ಕಿಸುವ ಸ್ಥಳ. ಹೊರಗಿನ ಒತ್ತಡ, ಸಮಸ್ಯೆಗಳನ್ನು ಬಿಟ್ಟು ಮನೆಗೆ ಪ್ರವೇಶಿಸುವಾಗ ನೆಮ್ಮದಿ ಮತ್ತು ಸಂತೋಷದ ವಾತಾವರಣ ಇರಬೇಕು ಎಂಬ ಸಂದೇಶವನ್ನು ಹೊಸ್ತಿಲು ಪೂಜೆ ಪ್ರತಿಬಿಂಬಿಸುತ್ತದೆ. ಪೂಜೆ, ದೀಪ ಬೆಳಗಿಸುವುದು, ರಂಗೋಲಿ ಹಾಕುವುದು ಮತ್ತು ಕುಟುಂಬದವರು ಒಟ್ಟಾಗಿ ಪ್ರಾರ್ಥಿಸುವುದು ಮನಸ್ಸಿಗೆ ಶಾಂತಿ ನೀಡುವಂತಹ ಧಾರ್ಮಿಕ-ಸಾಂಸ್ಕೃತಿಕ ಆಚರಣೆಯಾಗಿ ಪರಿಣಮಿಸುತ್ತದೆ.

**ಹಿರಿಯರ ಸಂಪ್ರದಾಯವನ್ನು ಉಳಿಸೋಣ**

ಇಂದಿನ ಆಧುನಿಕ ಜೀವನಶೈಲಿಯಲ್ಲಿ ಅನೇಕ ಸಾಂಪ್ರದಾಯಿಕ ಆಚರಣೆಗಳು ನಿಧಾನವಾಗಿ ಮರೆಯಾಗುತ್ತಿವೆ. ಆದರೆ ಹೊಸ್ತಿಲು ಪೂಜೆಯಂತಹ ಆಚರಣೆಗಳು ನಮ್ಮ ಸಂಸ್ಕೃತಿ, ಕುಟುಂಬದ ಒಗ್ಗಟ್ಟು ಮತ್ತು ಹಿರಿಯರ ಜೀವನಾನುಭವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಸೇತುವೆಯಂತಿವೆ. ಮಕ್ಕಳಿಗೆ ಹೊಸ್ತಿಲಿನ ಮಹತ್ವವನ್ನು ತಿಳಿಸುವುದರಿಂದ ನಮ್ಮ ಸಂಸ್ಕೃತಿಯ ಬಗ್ಗೆ ಗೌರವ ಮೂಡುತ್ತದೆ. ಸಂಪ್ರದಾಯಗಳನ್ನು ಅಂಧವಾಗಿ ಅನುಸರಿಸುವುದಕ್ಕಿಂತ, ಅವುಗಳ ಹಿಂದೆ ಇರುವ ಸಾಂಸ್ಕೃತಿಕ, ಸ್ವಚ್ಛತಾ ಮತ್ತು ಮಾನಸಿಕ ಅರ್ಥಗಳನ್ನು ಅರ್ಥಮಾಡಿಕೊಂಡು ಮುಂದುವರಿಸುವುದು ಹೆಚ್ಚು ಅರ್ಥಪೂರ್ಣ.

**ಕೊನೆಯ ಮಾತು**

ಮನೆಯ ಹೊಸ್ತಿಲು ಕೇವಲ ಮನೆಯ ಬಾಗಿಲಿನ ಕೆಳಭಾಗದಲ್ಲಿರುವ ಒಂದು ಭಾಗವಲ್ಲ. ಅದು ಮನೆಯ ಗೌರವ, ಶುಭ, ಸಂಸ್ಕೃತಿ ಮತ್ತು ಕುಟುಂಬದ ನೆಮ್ಮದಿಯ ಸಂಕೇತವಾಗಿ ಭಾರತೀಯ ಸಂಪ್ರದಾಯದಲ್ಲಿ ಸ್ಥಾನ ಪಡೆದಿದೆ. ಹೊಸ್ತಿಲಿಗೆ ಪೂಜೆ ಸಲ್ಲಿಸುವುದು ದೇವರ ಮೇಲಿನ ಭಕ್ತಿ ಮತ್ತು ಹಿರಿಯರ ಸಂಪ್ರದಾಯದ ಗೌರವವನ್ನು ವ್ಯಕ್ತಪಡಿಸುವ ಒಂದು ವಿಧಾನ. ಅರಿಶಿನ-ಕುಂಕುಮ, ಹೂವು, ರಂಗೋಲಿ ಮತ್ತು ದೀಪಗಳಿಂದ ಹೊಸ್ತಿಲನ್ನು ಅಲಂಕರಿಸುವ ಮೂಲಕ ಮನೆಗೆ ಶುಭವನ್ನು ಆಹ್ವಾನಿಸುತ್ತೇವೆ ಎಂಬ ನಂಬಿಕೆ ನಮ್ಮಲ್ಲಿ ಇದೆ. ನಂಬಿಕೆ ಇರಲಿ, ಇರದಿರಲಿ?ಮನೆಯ ಪ್ರವೇಶದ್ವಾರವನ್ನು ಸ್ವಚ್ಛವಾಗಿ, ಸುಂದರವಾಗಿ ಮತ್ತು ಗೌರವದಿಂದ ಕಾಪಾಡುವುದು ಪ್ರತಿಯೊಂದು ಕುಟುಂಬದ ಜವಾಬ್ದಾರಿಯಾಗಿದೆ.

"ಹೊಸ್ತಿಲು ಶುಭವಾಗಿದ್ದರೆ, ಮನೆಗೆ ಬರುವ ಪ್ರತಿಯೊಂದು ಹೆಜ್ಜೆಯೂ ಶುಭವಾಗಲಿ" ಎಂಬುದು ಈ ಸುಂದರ ಸಂಪ್ರದಾಯದ ಹಿಂದಿರುವ ಆಶಯ.

ವಿನಾಯಕ ಬಿ. ತಿಪ್ಪಣ್ಣನವರ

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ರಾಹುಲ್ ಗಾಂಧಿಯನ್ನು ಪ್ರಧಾನಿ ಅಭ್ಯರ್ಥಿಯಾಗಿ ಟಿವಿಕೆ ಬೆಂಬಲಿಸದಿದ್ದರೆ ರಾಜೀನಾಮೆ : ಕಾಂಗ್ರೆಸ್ ಸಚಿವರು



ನಾಗರಕೋಯಿಲ್: 2029ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬೆಂಬಲಿಸಲು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಒಪ್ಪದಿದ್ದರೆ, ತಾವು ಹಾಗೂ ಸಹೋದ್ಯೋಗಿ ಪಿ. ವಿಶ್ವನಾಥನ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಮಿಳುನಾಡು ಸಚಿವ ಎಸ್. ರಾಜೇಶ್ ಕುಮಾರ್ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರನ್ನು ಭಾರತದ ಮುಂದಿನ ಪ್ರಧಾನಿಯಾಗಿ ಕಾಂಗ್ರೆಸ್ ಬೆಂಬಲಿಸುತ್ತಿದ್ದು, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಬೇಕು ಎಂಬ ಟಿವಿಕೆ ನಾಯಕರು ಹಾಗೂ ಕಾರ್ಯಕರ್ತರ ಒತ್ತಾಯದ ನಡುವೆಯೇ ರಾಜೇಶ್ ಕುಮಾರ್ ಈ ಹೇಳಿಕೆ ನೀಡಿದ್ದಾರೆ. ಟಿವಿಕೆ ಈ ವಿಚಾರದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡದಿದ್ದರೆ, ತಾವು ಮತ್ತು ಉನ್ನತ ಶಿಕ್ಷಣ ಸಚಿವ ಪಿ. ವಿಶ್ವನಾಥನ್ ತಮ್ಮ ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಲು ಸಿದ್ಧರಿರುವುದಾಗಿ ಕುಮಾರ್ ತಿಳಿಸಿದ್ದಾರೆ. ಮೇ ತಿಂಗಳಲ್ಲಿ ಸರ್ಕಾರ ರಚನೆಗೆ ವಿಜಯ್ ನೇತೃತ್ವದ ಟಿವಿಕೆಗೆ ಕಾಂಗ್ರೆಸ್ ಬೆಂಬಲ ನೀಡಿದ ಬಳಿಕ ಕಾಂಗ್ರೆಸ್‌ಗೆ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸಲಾಗಿತ್ತು. ಇದೀಗ ರಾಜೇಶ್ ಕುಮಾರ್ ಅವರ ಹೇಳಿಕೆ ಕಾಂಗ್ರೆಸ್ ಹಾಗೂ ಟಿವಿಕೆ ನಡುವಿನ ಮೈತ್ರಿಯಲ್ಲಿ ಭಿನ್ನಾಭಿಪ್ರಾಯ ಉಂಟಾಗುವ ಸಾಧ್ಯತೆಯನ್ನು ಹೆಚ್ಚಿಸಿದೆ. ಕನ್ಯಾಕುಮಾರಿಯಲ್ಲಿ ನಿನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ರಾಜೇಶ್ ಕುಮಾರ್, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವ ಏಕೈಕ ಪ್ರಧಾನಿ ಅಭ್ಯರ್ಥಿ ರಾಹುಲ್ ಗಾಂಧಿ ಎಂಬ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಪಿ. ವಿಶ್ವನಾಥನ್ ಅವರ ಪ್ರತಿಕ್ರಿಯೆ ತಕ್ಷಣಕ್ಕೆ ಲಭ್ಯವಾಗಿಲ್ಲ. ಆದರೆ ರಾಜೇಶ್ ಕುಮಾರ್ ಅವರ ಹೇಳಿಕೆ ಕಾಂಗ್ರೆಸ್ ಮತ್ತು ಟಿವಿಕೆ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

## ಇರಾನ್ ಮೇಲೆ ಮತ್ತೆ ಕ್ಷಿಪಣಿ ದಾಳಿ ಮಾಡಿದ ಅಮೆರಿಕ, ಹಾರ್ಮುಜ್ ಜಲಸಂಧಿಯಲ್ಲಿ ತೀವ್ರಗೊಂಡ ಸಂಘರ್ಷ

ಟೆಹ್ರಾನ್: ಮಧ್ಯಪ್ರಾಚ್ಯದಲ್ಲಿ ಮತ್ತೊಮ್ಮೆ ಯುದ್ಧದ ಕಾರ್ಮೋಡ ಆವರಿಸಿದ್ದು, ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷ ಮತ್ತಷ್ಟು ತೀವ್ರಗೊಂಡಿದೆ. ಹಾರ್ಮುಜ್ ಜಲಸಂಧಿಯ ಆಯಕಟ್ಟಿನ ಪ್ರದೇಶದಲ್ಲಿರುವ ಇರಾನ್‌ನ ಲಾರಕ್ ದ್ವೀಪದ ಮೇಲೆ ಅಮೆರಿಕ ಪಡೆಗಳು ನಡೆಸಿದ ಕ್ಷಿಪಣಿ ದಾಳಿಯಲ್ಲಿ ಇರಾನ್‌ನ ಎರಡು ಪ್ರಮುಖ ಕ್ಷಿಪಣಿ ಉಡಾವಣಾ ವ್ಯವಸ್ಥೆಗಳು (ಲಾಂಚರ್‌ಗಳು) ಧ್ವಂಸಗೊಂಡಿವೆ ಎನ್ನಲಾಗಿದೆ. ಜುಲೈ ಅಂತ್ಯದ ಬಳಿಕ ಇರಾನ್ ಭೂಪ್ರದೇಶದ ಮೇಲೆ ಅಮೆರಿಕ ನಡೆಸಿದ ಮೊದಲ ನೇರ ದಾಳಿ ಇದಾಗಿದೆ ಎಂದು ವರದಿಯಾಗಿದೆ.



ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ಹಡಗುಗಳ ಮೇಲೆ ದಾಳಿ ನಡೆಸಲು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಪಡೆಗಳು ಸಮುದ್ರ ಗಣಿಗಳು ಹಾಗೂ ರಾಕೆಟ್‌ಗಳನ್ನು ಸಿದ್ಧಪಡಿಸುತ್ತಿದ್ದವು ಎಂಬ ಮಾಹಿತಿ ಅಮೆರಿಕ ಪಡೆಗಳಿಗೆ ಲಭ್ಯವಾಗಿತ್ತು ಎನ್ನಲಾಗಿದೆ. ಇದರ ಆಧಾರದ ಮೇಲೆ ಅಮೆರಿಕ ಪಡೆಗಳು ತಕ್ಷಣ ಪ್ರತಿದಾಳಿ ನಡೆಸಿ ಲಾಂಚರ್‌ಗಳನ್ನು ಧ್ವಂಸಗೊಳಿಸಿವೆ ಎಂದು ತಿಳಿದುಬಂದಿದೆ. ಅಮೆರಿಕದ ದಾಳಿಗೆ ಇರಾನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಇದಕ್ಕೆ ತಕ್ಕ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಸರ್ಕಾರ ಹಾಗೂ ಸೇನಾ ನಾಯಕರು ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಜಲಸಂಧಿಗೆ ಲಾರಕ್ ದ್ವೀಪದ ಆಯಕಟ್ಟಿನ ಸ್ಥಾನ ದಾಳಿಗೊಳಗಾದ ಲಾರಕ್ ದ್ವೀಪವು ಹಾರ್ಮುಜ್ ದ್ವೀಪದ ದಕ್ಷಿಣಕ್ಕೆ ಹಾಗೂ ಕೆಶ್ ದ್ವೀಪದ ಪೂರ್ವಕ್ಕೆ ಇದೆ. ಇರಾನ್ ರಾಜಧಾನಿ ಟೆಹ್ರಾನ್‌ನಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು 1,100 ಕಿ.ಮೀ. ದೂರದಲ್ಲಿರುವ ಈ ದ್ವೀಪವು ಹಾರ್ಮುಜ್ ಜಲಸಂಧಿಯ ಮೇಲೆ ನಿಗಾ ಇಡಲು ಆಯಕಟ್ಟಿನ ಪ್ರದೇಶವಾಗಿದೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿಯಲ್ಲಿ ಸಂಘರ್ಷ ತೀವ್ರಗೊಂಡಿರುವುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆತಂಕಕ್ಕೆ ಕಾರಣವಾಗಿದೆ. ಸಂಘರ್ಷ ಮತ್ತಷ್ಟು ಉಲ್ಬಣಗೊಂಡರೆ ಜಾಗತಿಕ ತೈಲ ಪೂರೈಕೆ ಸರಪಳಿ, ಇಂಧನ ಬೆಲೆ ಹಾಗೂ ಅಂತರರಾಷ್ಟ್ರೀಯ ವ್ಯಾಪಾರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ಜಾಗತಿಕ ಸಮುದಾಯವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಪಶುವೈದ್ಯರ ನೇಮಕಾತಿ ಹಗರಣ : ಬಿಜೆಪಿ ಕಾರ್ಯಕರ್ತ ಬಸವರಾಜ್ ಕನ್ನಾಳೆ ಸಿಐಡಿ ವಶಕ್ಕೆ

ಬೆಂಗಳೂರು: ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣದ ತನಿಖೆಯನ್ನು ತೀವ್ರಗೊಳಿಸಿರುವ ಸಿಐಡಿ ಅಧಿಕಾರಿಗಳು, ಪ್ರಮುಖ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಿದ್ದ ಎನ್ನಲಾದ ಬಿಜೆಪಿ ಕಾರ್ಯಕರ್ತ ಬಸವರಾಜ್ ಕನ್ನಾಳೆಯನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿದ್ದಾರೆ.

ಬೀದರ್ ಜಿಲ್ಲೆಯ ಭಾಲ್ಕಿ ಮೂಲದ ಬಸವರಾಜ್ ಕನ್ನಾಳೆ, ಹಗರಣದ ಪ್ರಮುಖ ಆರೋಪಿಯಾಗಿರುವ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಉದ್ಯೋಗಾಕಾಂಕ್ಷಿಗಳ ನಡುವೆ ಪ್ರಮುಖ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದನು ಎನ್ನಲಾಗಿದೆ. ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮ ಎಸಗಲು 12ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಗಂಗ್ವಾರ್ ಅವರೊಂದಿಗೆ ಸಂಪರ್ಕ ಕಲ್ಪಿಸುವಲ್ಲಿ ಬಸವರಾಜ್ ಪ್ರಮುಖ ಪಾತ್ರ ವಹಿಸಿದ್ದನು ಎಂಬ ಆರೋಪ ಕೇಳಿಬಂದಿದೆ. ದೆಹಲಿಯಲ್ಲಿ ವಶಕ್ಕೆ ಪಡೆದ ಬಳಿಕ ಆರೋಪಿಯನ್ನು ಬೆಂಗಳೂರಿಗೆ ಕರೆತರಲಾಗಿದೆ ಎಂದು ತಿಳಿದುಬಂದಿದೆ. ಭಾಲ್ಕಿಯ ಎರಡು ಮನೆಗಳಲ್ಲಿ ಪರಿಶೀಲನೆ ಬಸವರಾಜ್ ಕನ್ನಾಳೆ ವಶಕ್ಕೆ ಪಡೆದ ಬೆನ್ನಲ್ಲೇ ಭಾಲ್ಕಿ ಪಟ್ಟಣದ ಲೆಕ್ಚರ್ ಕಾಲೋನಿಯಲ್ಲಿರುವ ಅವರ ನಿವಾಸ ಹಾಗೂ ದೋಣಗಾಪುರ ಗ್ರಾಮದ ನಿವಾಸದಲ್ಲಿ ಸ್ಥಳೀಯ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಮೇಲಧಿಕಾರಿಗಳ ಸೂಚನೆಯ ಮೇರೆಗೆ ಈ ತಪಾಸಣೆ ನಡೆಸಲಾಗಿದೆ ಎಂದು ವರದಿಯಾಗಿದೆ. ಪರಿಶೀಲನೆ ವೇಳೆ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು, ಎಲೆಕ್ಟ್ರಾನಿಕ್ ಸಾಧನಗಳು ಅಥವಾ ಇತರೆ ಪ್ರಮುಖ ಮಾಹಿತಿಗಳು ಪತ್ತೆಯಾಗಿವೆಯೇ ಎಂಬುದು



ತನಿಖೆ ಮುಂದುವರಿದಂತೆ ಸ್ಪಷ್ಟವಾಗಬೇಕಿದೆ.

**ಹುದ್ದೆಗೆ 80 ಲಕ್ಷದಿಂದ 1 ಕೋಟಿ ಬೇಡಿಕೆ ಆರೋಪ**

ಕೆಪಿಎಸ್‌ಸಿ 400 ಪಶುವೈದ್ಯಾಧಿಕಾರಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಜುಲೈ 17ರಂದು ಪ್ರಕಟಿಸಿತ್ತು. ಇದರಲ್ಲಿ 342 ಸಾಮಾನ್ಯ ಹುದ್ದೆಗಳು ಹಾಗೂ 58 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದ್ದವು.ಆಯ್ಕೆ ಪಟ್ಟಿ ಪ್ರಕಟವಾದ ಬಳಿಕ ನೇಮಕಾತಿಯಲ್ಲಿ ಭಾರಿ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿಬಂದಿದ್ದವು. ಕೆಲವು ಅಭ್ಯರ್ಥಿಗಳು ಪಶುವೈದ್ಯಾಧಿಕಾರಿ ಹುದ್ದೆ ಕೊಡಿಸಲು ?80 ಲಕ್ಷದಿಂದ ?1 ಕೋಟಿವರೆಗೆ ಹಣಕ್ಕೆ ಬೇಡಿಕೆ ಇಡಲಾಗಿತ್ತು ಎಂದು ಆರೋಪಿಸಿದ್ದರು. ಇದಲ್ಲದೆ, ಕೆಲವು ಅಭ್ಯರ್ಥಿಗಳು ಮಧ್ಯವರ್ತಿಗಳೊಂದಿಗೆ ನಡೆದಿದೆ ಎನ್ನಲಾದ ಸಂಭಾಷಣೆಗಳ ಆಡಿಯೋ, ಛಾಯಾಚಿತ್ರ ಹಾಗೂ ವಿಡಿಯೋಗಳನ್ನು ಕೂಡ ಬಹಿರಂಗಪಡಿಸಿದ್ದರು. ಆರೋಪಗಳ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಪಶುವೈದ್ಯ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿ, ನೇಮಕಾತಿ ಪ್ರಕ್ರಿಯೆಯ ಬಗ್ಗೆ ಸಮಗ್ರ ಹಾಗೂ ಪಾರದರ್ಶಕ ತನಿಖೆಗೆ ಒತ್ತಾಯಿಸಿದ್ದರು.ಆದರೆ, ಈ ಆರೋಪಗಳ ಸತ್ಯಾಸತ್ಯತೆ ತನಿಖೆಯಿಂದಲೇ ಅಂತಿಮವಾಗಿ ದೃಢಪಡಿಸಬೇಕಿದೆ.

**ಕೆಪಿಎಸ್‌ಸಿ ಆಯ್ಕೆ ಪಟ್ಟಿಗೆ ತಾತ್ಕಾಲಿಕ ತಡೆ**

ಆರೋಪಗಳು ತೀವ್ರಗೊಂಡ ಹಿನ್ನೆಲೆಯಲ್ಲಿ ಕೆಪಿಎಸ್‌ಸಿ ತುರ್ತು ಸಭೆ ನಡೆಸಿ 400 ಪಶುವೈದ್ಯಾಧಿಕಾರಿಗಳ ಆಯ್ಕೆ ಪಟ್ಟಿಯನ್ನು ತಾತ್ಕಾಲಿಕವಾಗಿ ತಡೆಹಿಡಿದಿತ್ತು. ಅಕ್ರಮಗಳ ಕುರಿತು ಆಂತರಿಕ ತನಿಖೆ ನಡೆಸಲು ಸಮಿತಿಯನ್ನೂ ರಚಿಸಲಾಗಿತ್ತು. ಇದೇ ವೇಳೆ ಜುಲೈ 24ರಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಾಜಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಸೇರಿದಂತೆ ಕೆಲ ಅಧಿಕಾರಿಗಳು ಹಾಗೂ ಅಭ್ಯರ್ಥಿಗಳ ಹೆಸರುಗಳು ಎಫ್‌ಐಆರ್‌ನಲ್ಲಿ ಕಾಣಿಸಿಕೊಂಡಿದ್ದವು.ನಂತರ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿತ್ತು. ಜುಲೈ 28ರಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರು ಸಿಐಡಿ ತನಿಖೆಗೆ ಸಂಬಂಧಿಸಿದ ಆದೇಶ ಹೊರಡಿಸಿದ್ದರು.

**ಗಂಗ್ವಾರ್ ಬಳಿಕ ಕನ್ನಾಳೆ ಸಿಐಡಿ ಬಲೆಗೆ**

ಪ್ರಕರಣ ಮತ್ತಷ್ಟು ಗಂಭೀರ ಸ್ವರೂಪ ಪಡೆಯಲು ಪ್ರಮುಖ ಕಾರಣವಾಗಿದ್ದು, ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಸಿಐಡಿ ವಶಕ್ಕೆ ಪಡೆದಿರುವುದು.2016ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಗಂಗ್ವಾರ್, ಪಶುವೈದ್ಯಾಧಿಕಾರಿ ನೇಮಕಾತಿ ಪ್ರಕ್ರಿಯೆ ನಡೆದ ಅವಧಿಯಲ್ಲಿ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಎಂಎಸ್‌ಎಂಇ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಆಗಸ್ಟ್ 28 ಮತ್ತು 29ರಂದು ಸಿಐಡಿ ಅಧಿಕಾರಿಗಳು ಗಂಗ್ವಾರ್ ಅವರನ್ನು ಸುದೀರ್ಘವಾಗಿ ವಿಚಾರಣೆ ನಡೆಸಿದ ಬಳಿಕ ವಶಕ್ಕೆ ಪಡೆದಿದ್ದರು. ವಿಚಾರಣೆ ವೇಳೆ ಅವರು ನೀಡಿದ ಉತ್ತರಗಳ ಬಗ್ಗೆ ತನಿಖಾಧಿಕಾರಿಗಳಿಗೆ ಅಸಮಾಧಾನ ಉಂಟಾಗಿತ್ತು ಎನ್ನಲಾಗಿದೆ. ಬಳಿಕ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇದೀಗ ಗಂಗ್ವಾರ್ ಅವರೊಂದಿಗೆ ಸಂಪರ್ಕ ಹೊಂದಿದ್ದ ಎನ್ನಲಾದ ಬಸವರಾಜ್ ಕನ್ನಾಳೆ ಸಿಐಡಿ ವಶಕ್ಕೆ ಸಿಕ್ಕಿರುವುದು ಪ್ರಕರಣದ ತನಿಖೆಗೆ ಮತ್ತಷ್ಟು ವೇಗ ನೀಡಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮದ ಹಿಂದೆ ಇನ್ನಷ್ಟು ಮಧ್ಯವರ್ತಿಗಳು ಹಾಗೂ ಪ್ರಭಾವಿಗಳ ಪಾತ್ರವಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಯುವ ಸಾಧ್ಯತೆಯಿದೆ.

ಪಶುವೈದ್ಯಾಧಿಕಾರಿ ನೇಮಕಾತಿ ಸೇರಿದಂತೆ ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಹಾಗೂ ಪ್ರಭಾವಿಗಳ ಹಸ್ತಕ್ಷೇಪದ ಆರೋಪಗಳು ಉದ್ಯೋಗಾಕಾಂಕ್ಷಿಗಳಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ಸಿಐಡಿ ತನಿಖೆ ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ವ್ಯಕ್ತಿಗಳತ್ತ ತಿರುಗುವ ಸಾಧ್ಯತೆಯಿದೆ.

# ಕೆಪಿಎಸ್‌ಸಿ ಹಗರಣದಲ್ಲಿ ನನ್ನ ಪಾತ್ರ ಸಾಬೀತಾದರೆ ರಾಜಕೀಯ ನಿವೃತ್ತಿ : ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕೆಪಿಎಸ್‌ಸಿ ನೇಮಕಾತಿ ಹಗರಣದಲ್ಲಿ ತಮ್ಮ ನೇರ ಅಥವಾ ಪರೋಕ್ಷ ಪಾತ್ರ ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದ್ದಾರೆ. ಇದೇ ವೇಳೆ, ಹಗರಣದಲ್ಲಿ ಜೆಡಿಎಸ್ ಅಥವಾ ಬಿಜೆಪಿಯವರ ಪಾತ್ರ ಸಾಬೀತಾದರೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರಾಜಕೀಯ ನಿವೃತ್ತಿ ಪಡೆಯುತ್ತಾರೆಯೇ ಎಂದು ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 24 ಸಹಾಯಕ ಎಂಜಿನಿಯರ್‌ಗಳ ನೇಮಕಾತಿ ವಿಚಾರದಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಕುಮಾರಸ್ವಾಮಿ ಅವರು ಯಾವುದೇ ದಾಖಲೆ ಅಥವಾ ಆಧಾರಗಳಿಲ್ಲದೆ 'ಹಿಟ್ ಅಂಡ್ ರನ್' ಆರೋಪ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಓಎಂಆರ್ ಶೀಟ್ ತಿದ್ದುಪಡಿ ವಿಚಾರದಲ್ಲಿ ತಮ್ಮ ವಿರುದ್ಧ ಆರೋಪ ಮಾಡಲಾಗುತ್ತಿದೆ. ಓಎಂಆರ್ ಶೀಟ್‌ಗಳು ಸಚಿವರು ಅಥವಾ ಸರ್ಕಾರದ ಇಲಾಖಾ ಕಾರ್ಯದರ್ಶಿಗಳ ಅಧೀನದಲ್ಲಿರುತ್ತವೆಯೇ ಎಂಬುದು ಮಾಜಿ ಮುಖ್ಯಮಂತ್ರಿಗೆ ಗೊತ್ತಿಲ್ಲವೇ? ಕೆಪಿಎಸ್‌ಸಿಯ ಅಧೀನದಲ್ಲಿರುವ ಓಎಂಆರ್ ಶೀಟ್‌ಗಳಲ್ಲಿ ಅಕ್ರಮ ನಡೆದಿದ್ದರೆ ಅದಕ್ಕೆ ಸಚಿವರು ಹೇಗೆ ಹೊಣೆಯಾಗುತ್ತಾರೆ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರು ಎಂಜಿನಿಯರ್‌ಗಳ ನೇಮಕಾತಿಯಲ್ಲಿ ನಡೆದಿರುವ ಲೋಪಗಳೇನು ಎಂಬುದನ್ನು ದಾಖಲೆಗಳ ಸಹಿತ ಹೇಳದೆ ಮನಸೋಇಚ್ಛೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಕೇಂದ್ರ ಸಚಿವರ ಘನತೆಗೆ ಇದು ತಕ್ಕದ್ದಲ್ಲ. ನಮಗೂ ಮಾತನಾಡಲು ಬರುತ್ತದೆ. ರಾಜಕೀಯವಾಗಿ ದೊಡ್ಡ ಇತಿಹಾಸವಿರುವ ಕುಟುಂಬದ ಹಿನ್ನೆಲೆಯಿದ್ದಾರೆ ಎಂಬ ಕಾರಣಕ್ಕೆ ನಾವು ಸುಮ್ಮನಿದ್ದೇವೆ ಎಂದು ತಿರುಗೇಟು ನೀಡಿದರು. ಸರ್ಕಾರಿ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸುವುದು, ಪರೀಕ್ಷೆ ನಡೆಸುವುದು, ತಾತ್ಕಾಲಿಕ ಹಾಗೂ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವುದು ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಕೆಪಿಎಸ್‌ಸಿಯೇ ನಿರ್ವಹಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಈ ಹಿಂದೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದಾಗ ಆನಂದ ಸಿದ್ದರೆಡ್ಡಿ ಎಂಬುವರು ಆಕ್ಷೇಪಣೆ ಸಲ್ಲಿಸಿದ್ದರು. ಈ ಕುರಿತು ತನಿಖೆ ನಡೆಸಲು ಕೆಪಿಎಸ್‌ಸಿ ಡಾ. ಶಾಂತ ಹೊಸಮನಿ, ಗೀತಾ ಹಾಗೂ ಮುಸ್ತಾಫ ಹುಸೈನ್ ಅವರನ್ನೊಳಗೊಂಡ ಮೂರು ಸದಸ್ಯರ ಸಮಿತಿ ರಚಿಸಿತ್ತು. ಉಪ ಸಮಿತಿಯ ತನಿಖೆ ನಡೆಯುತ್ತಿರುವಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅಂತಿಮ ಆಯ್ಕೆ ಪಟ್ಟಿಯನ್ನು ಕಳುಹಿಸಲಾಗಿತ್ತು. ನಂತರ ಮೂರು ಸದಸ್ಯರ ಸಮಿತಿಯನ್ನು ರದ್ದುಪಡಿಸಿ, ಡಾ. ವಿಜಯ್‌ಕುಮಾರ್ ಕೋಚನೂರು ನೇತೃತ್ವದಲ್ಲಿ ಐದು ಸದಸ್ಯರ ಸಮಿತಿಯನ್ನು ಕೆಪಿಎಸ್‌ಸಿ ರಚಿಸಿತು. ಈ ಸಮಿತಿ 40 ಸಭೆಗಳನ್ನು ನಡೆಸಿದೆ. ಆದರೆ ತನಿಖಾ ವರದಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನೀಡಿಲ್ಲ. ಈ ಕುರಿತು ಹಲವು ಬಾರಿ ಪತ್ರ ಬರೆದರೂ ಕೆಪಿಎಸ್‌ಸಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಹೇಳಿದರು.

ಕೆಪಿಎಸ್‌ಸಿ ನೀಡಿದ ಅಂತಿಮ ಆಯ್ಕೆ ಪಟ್ಟಿಯ ಆಧಾರದ ಮೇಲೆ 2025ರ ಜನವರಿ 22ರಂದು ವಿಶ್ವನಾಥ್ ಎಂಬುವರಿಗೆ ಕೊನೆಯ ನೇಮಕಾತಿ ಆದೇಶ ನೀಡಲಾಯಿತು. ಇದರ ಮರುದಿನವೇ ಕೆಪಿಎಸ್‌ಸಿ ರಚಿಸಿದ್ದ ಐದು ಸದಸ್ಯರ ಸಮಿತಿ ಅಂದಿನ ಮುಖ್ಯಮಂತ್ರಿಗೆ ವರದಿ ಸಲ್ಲಿಸಿತ್ತು ಎಂದು ವಿವರಿಸಿದರು. ನೇಮಕಾತಿಯಲ್ಲಿ ಲೋಪಗಳಾಗಿದ್ದರೆ ಆಯ್ಕೆ ಪಟ್ಟಿಯನ್ನು



ತಡೆಹಿಡಿಯಲು ಅಥವಾ ರದ್ದುಗೊಳಿಸಲು ಕೆಪಿಎಸ್‌ಸಿಗೆ ಅಧಿಕಾರವಿದೆ. ಆದರೆ, ಅಂತಹ ಕ್ರಮ ಕೈಗೊಂಡಿರಲಿಲ್ಲ. ಅಂತಿಮವಾಗಿ ನೇಮಕಾತಿ ಆದೇಶಗಳನ್ನು ನೀಡಿದ ಬಳಿಕ ಆಯ್ಕೆ ಪಟ್ಟಿಯನ್ನು ತಡೆಹಿಡಿಯುವಂತೆ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಹೇಳಿದರು.

ಆಯ್ಕೆಯಾದ ಅಭ್ಯರ್ಥಿಗಳು ಕೆಎಟಿ ಮೊರೆ ಹೋಗಿದ್ದರು. ಬಳಿಕ ಹೈಕೋರ್ಟ್‌ಗೂ ಮೇಲ್ಮನವಿ ಸಲ್ಲಿಸಲಾಗಿತ್ತು. ಯಾವುದೇ ಹಂತದಲ್ಲೂ ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ. ಹೀಗಿರುವಾಗ ಕುಮಾರಸ್ವಾಮಿ ಅವರು ತಮ್ಮ ವಿರುದ್ಧ ಹೇಗೆ ಆರೋಪ ಮಾಡುತ್ತಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

**'ಕುಮಾರಸ್ವಾಮಿಗೆ ಆರೋಪ ಮಾಡುವ ಗುತ್ತಿಗೆ ಸಿಕ್ಕಂತಿದೆ'**ಕೆಪಿಎಸ್‌ಸಿ ನೇಮಕಾತಿ ವಿಚಾರವಾಗಿ ಬಿಜೆಪಿಯವರು ಯಾವುದೇ ಹೋರಾಟ ನಡೆಸುತ್ತಿಲ್ಲ. ಕುಮಾರಸ್ವಾಮಿ ಇತ್ತೀಚೆಗೆ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿದ್ದರು. ಅಲ್ಲಿಗೆ ಹೋಗಿ ತಮ್ಮ ವಿರುದ್ಧ ಆರೋಪ ಮಾಡಲು ಗುತ್ತಿಗೆ ಪಡೆದಂತಿದೆ ಎಂದು ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದರು. ಕೆಪಿಎಸ್‌ಸಿಗೆ ಸಾಹುಕಾರ್ ಶಿವಶಂಕರಪ್ಪ ಅವರ ನೇಮಕಾತಿ ಕುರಿತು ಕುಮಾರಸ್ವಾಮಿ ಏಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದ ಅವರು, ಈ ವಿಚಾರದಲ್ಲೂ ಅವರು ಸ್ಪಷ್ಟನೆ ನೀಡಬೇಕು ಎಂದರು. ಯುವಕರ ಭವಿಷ್ಯದೊಂದಿಗೆ ಚೆಲ್ಲಾಟವಾಡುವ ಯಾರನ್ನೂ ನಮ್ಮ ಸರ್ಕಾರ ಸಹಿಸುವುದಿಲ್ಲ. ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣದ ತನಿಖೆಯಲ್ಲಿ ಐಎಎಸ್ ಅಧಿಕಾರಿಯೊಬ್ಬರನ್ನು ಬಂಧಿಸಲಾಗಿದೆ. ಅವರು ದೇಶದಿಂದ ಪರಾರಿಯಾಗುವ ಹಂತದಲ್ಲಿದ್ದಾಗಲೇ ದೆಹಲಿ ವಿಮಾನ ನಿಲ್ದಾಣದಲ್ಲಿ ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದು ಕರೆತಂದಿದ್ದಾರೆ ಎಂದು ಹೇಳಿದರು. ತನಿಖೆ ಆಳಕ್ಕೆ ಹೋದಷ್ಟು ಬಿಜೆಪಿಯವರ ಆತಂಕವೂ ಹೆಚ್ಚಾಗಲಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

# ಬೆಂಗಳೂರಲ್ಲಿ ನೆಲೆಸಿದ್ದ 39 ಅಕ್ರಮ ಬಾಂಗ್ಲಾದೇಶಿ ಪ್ರಜೆಗಳ ಗಡಿಪಾರು

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದರೆಂದು ಗುರುತಿಸಲಾದ 39 ಬಾಂಗ್ಲಾದೇಶಿ ಪ್ರಜೆಗಳನ್ನು ಬೆಂಗಳೂರು ಪೊಲೀಸರು ಬಿಗಿ ಭದ್ರತೆಯಲ್ಲಿ ಗಡಿಪಾರು ಪ್ರಕ್ರಿಯೆಗಾಗಿ ಕರೆದೊಯ್ದಿದ್ದಾರೆ.ಬೈಯಪ್ಪನಹಳ್ಳಿಯ ಎಸ್‌ಎಂವಿಟಿ ರೈಲ್ವೆ ಟರ್ಮಿನಲ್‌ನಿಂದ 31 ಮಂದಿಯನ್ನು ರೈಲಿನ ಮೂಲಕ ಹಾಗೂ 8 ಮಂದಿಯನ್ನು ವಿಮಾನದ ಮೂಲಕ ಪಶ್ಚಿಮ ಬಂಗಾಳದ ಗಡಿ ಭಾಗಕ್ಕೆ ಕರೆದೊಯ್ಯಲಾಗುತ್ತಿದೆ. ಅಲ್ಲಿ ಅಗತ್ಯ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ಬಳಿಕ ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಹಾಗೂ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ಬೆಂಗಳೂರು ನಗರ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆಗಳು ಮುಂದುವರಿದಿವೆ. ವೀಸಾ ಅವಧಿ ಮುಗಿದಿದ್ದರೂ ಅಥವಾ ಯಾವುದೇ ಅಧಿಕೃತ ದಾಖಲೆಗಳಿಲ್ಲದೆ ನಗರದ ವಿವಿಧ ಪ್ರದೇಶಗಳಲ್ಲಿ ಕಾರ್ಮಿಕರು ಹಾಗೂ ಇತರ ಕೆಲಸಗಳಲ್ಲಿ



ತೊಡಗಿಸಿಕೊಂಡಿದ್ದವರನ್ನು ಗುರಿಯಾಗಿಸಿಕೊಂಡು ಈ ಕಾರ್ಯಾಚರಣೆ ನಡೆಸಲಾಗಿದೆ. ಬೆಂಗಳೂರಿನ ವಿವಿಧ 10 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಕ್ರಮ ವಲಸಿಗರೆಂದು ಗುರುತಿಸಲಾದ 39 ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಲಾಗಿತ್ತು.

**20ಕ್ಕೂ ಹೆಚ್ಚು ಪೊಲೀಸರ ಕಾವಲು**

ಬಂಧಿತರನ್ನು ಎಸ್‌ಎಂವಿಟಿ ರೈಲ್ವೆ ಟರ್ಮಿನಲ್‌ನಿಂದ ಪಶ್ಚಿಮ ಬಂಗಾಳದ ಮಾಲ್ಡಾ ಗಡಿ ಭಾಗದವರೆಗೆ ಸುಮಾರು 20ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ಕಾವಲಿನಲ್ಲಿ ಕರೆದೊಯ್ಯಲಾಗುತ್ತಿದೆ.ಮಾಲ್ಡಾ ಗಡಿ ಭಾಗ ತಲುಪಿದ ಬಳಿಕ ಅಲ್ಲಿನ ಗಡಿ ಭದ್ರತಾ ಪಡೆ ಹಾಗೂ ವಲಸೆ (ಇಮಿಗ್ರೇಷನ್) ಅಧಿಕಾರಿಗಳ ಸಹಯೋಗದಲ್ಲಿ ಬಂಧಿತರ ರಾಷ್ಟ್ರೀಯತೆ ಮತ್ತು ದಾಖಲೆಗಳ ಪರಿಶೀಲನೆ ನಡೆಸಿ, ನಿಯಮಾನುಸಾರ ಬಾಂಗ್ಲಾದೇಶದ ಅಧಿಕಾರಿಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿದುಬಂದಿದೆ.

**ಅಕ್ರಮ ವಲಸೆ ವಿರುದ್ಧ ಕಣ್ಗಾವಲು**

ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧೆಡೆ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಿ ಗಡಿಪಾರು ಮಾಡಿರುವ ಹಲವು ಪ್ರಕರಣಗಳು ಈ ಹಿಂದೆಯೂ ನಡೆದಿವೆ. ಎಲೆಕ್ಟ್ರಾನಿಕ್ ಸಿಟಿ, ಮಹದೇವಪುರ, ವರ್ತೂರು ಹಾಗೂ ರಾಮಮೂರ್ತಿನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಪೊಲೀಸರು ಪರಿಶೀಲನೆ ನಡೆಸಿ, ಅಕ್ರಮ ದಾಖಲೆಗಳನ್ನು ಹೊಂದಿರುವ ಆರೋಪದ ಮೇಲೆ ವಿದೇಶಿ ಪ್ರಜೆಗಳನ್ನು ವಶಕ್ಕೆ ಪಡೆದಿದ್ದರು. ಅಕ್ರಮ ವಲಸೆ ತಡೆಯಲು ರಾಜ್ಯದ ವಿವಿಧ ಭದ್ರತಾ ಏಜೆನ್ಸಿಗಳು ತನಿಖೆ ಹಾಗೂ ಕಣ್ಗಾವಲನ್ನು ಮುಂದುವರಿಸಿವೆ. ಕರ್ನಾಟಕದಲ್ಲಿ ಅಕ್ರಮ ವಲಸಿಗರ ವಿರುದ್ಧದ ಕ್ರಮವನ್ನು ಈ ವರ್ಷ ಮತ್ತಷ್ಟು ಚುರುಕುಗೊಳಿಸಲಾಗಿದೆ. ರಾಜ್ಯ ಸರ್ಕಾರದ ಅಂಕಿ-ಅಂಶಗಳ ಪ್ರಕಾರ, 2026ರ ಏಪ್ರಿಲ್ ಅಂತ್ಯದ ವೇಳೆಗೆ 427 ವಿದೇಶಿ ಪ್ರಜೆಗಳನ್ನು ಕರ್ನಾಟಕದಿಂದ ಗಡಿಪಾರು ಮಾಡಲಾಗಿತ್ತು. ಇವರಲ್ಲಿ 286 ಮಂದಿ ಬಾಂಗ್ಲಾದೇಶಿ ಪ್ರಜೆಗಳು ಎಂದು ತಿಳಿಸಲಾಗಿತ್ತು. 2025ರಲ್ಲಿ 401 ಹಾಗೂ 2024ರಲ್ಲಿ 339 ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲಾಗಿತ್ತು ಎಂದು ಸರ್ಕಾರದ ಅಂಕಿ-ಅಂಶಗಳು ಹೇಳುತ್ತವೆ.

ಇದೇ ವೇಳೆ, ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ 911 ಅಕ್ರಮ ವಲಸಿಗರನ್ನು ಗುರುತಿಸಲಾಗಿದ್ದು, ಅವರಲ್ಲಿ 868 ಮಂದಿ ಬಾಂಗ್ಲಾದೇಶದವರು ಎಂದು ರಾಜ್ಯ ಸರ್ಕಾರದ ಮಾಹಿತಿ ತಿಳಿಸಿದೆ. ಈ ಪೈಕಿ 365 ಮಂದಿ ಅಪರಾಧ ಪ್ರಕರಣಗಳೊಂದಿಗೆ ಸಂಪರ್ಕ ಹೊಂದಿದ್ದರು ಎಂಬ ಮಾಹಿತಿಯೂ ಹೊರಬಿದ್ದಿದೆ. ಬೆಂಗಳೂರಿನಿಂದ ಮಾಲ್ಡಾಕ್ಕೆ ಕರೆದೊಯ್ಯಲಾಗಿರುವ 39 ಮಂದಿಯ ಪ್ರಕರಣದಲ್ಲಿ ಅವರ ರಾಷ್ಟ್ರೀಯತೆ, ದಾಖಲೆಗಳು ಹಾಗೂ ಭಾರತದಲ್ಲಿ ಕಾನೂನುಬದ್ಧವಾಗಿ ವಾಸಿಸುತ್ತಿದ್ದರೇ ಎಂಬುದರ ಅಂತಿಮ ಪರಿಶೀಲನೆ ಪ್ರಮುಖ ಹಂತವಾಗಲಿದೆ. ಬಳಿಕ ಭಾರತ ಮತ್ತು ಬಾಂಗ್ಲಾದೇಶದ ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯದಲ್ಲಿ ನಿಯಮಾನುಸಾರ ಹಸ್ತಾಂತರ ಅಥವಾ ಗಡಿಪಾರು ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com